بِسْمِ اللهِ الرَّحْمٰنِ الرَّحِيْمِ    نَحْمَدُهٗ وَنُصَلِّي عَلٰى رَسُوْلِهِ الْكَرِيْمِ    وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 04

# ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 15

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

13 ಏಪ್ರೆಲ್ 2023, 13 ಶಹಾದತ್ 1402 ಹಿಜರಿ ಶಮ್ಸಿ,
21 ರಮಝಾನ್ 1444 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

شَهْرُ رَمَضَانَ الَّذِيْٓ اُنْزِلَ فِيْهِ الْقُرْاٰنُ
هُدًى لِّلنَّاسِ وَبَيِّنٰتٍ مِّنَ الْهُدٰى وَالْفُرْقَانِ ۚ
فَمَنْ شَهِدَ مِنْكُمُ الشَّهْرَ فَلْيَصُمْهُ (بقرہ:186)

(ಅಲ್-ಬಖರ: 186)

ಅಂದರೆ: ಸಕಲ ಮಾನವರಿಗೆ ಸನ್ಮಾರ್ಗ ದರ್ಶಕವಾದ, ಮಾರ್ಗದರ್ಶನ ಮತ್ತು ಸತ್ಯಾಸತ್ಯ ವಿವೇಚನೆಯ ಸ್ಪಷ್ಟವಾದ ಸಾಕ್ಷ್ಯಗಳಿಂದ ಕೂಡಿದ ಖುರ್‌ಆನ್ ಅವತೀರ್ಣವಾದ ಮಾಸವಾಗಿದೆ ರಮಝಾನ್. ಆದ್ದರಿಂದ ನಿಮ್ಮ ಪೈಕಿ ಯಾರಾದರೂ ಈ ಮಾಸವನ್ನು ಪಡೆದರೆ ಆತನು ಅದರಲ್ಲಿ ಉಪವಾಸ ಮಾಡಲಿ.

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ರಮಝಾನ್‌ನ ಮಹತ್ವ

**(1898)** ಹರ್ಝ್‌ರತ್ ಅಬೂ ಹುರೈರ(ರ) ವರದಿ ಮಾಡುತ್ತಾರೆ ರಸೂಲುಲ್ಲಾಹ್(ಸ) ನುಡಿಯುತ್ತಾರೆ: ರಮಝಾನ್ ಬಂದಾಗ ಸ್ವರ್ಗದ ದ್ವಾರಗಳು ತೆರೆಯಲ್ಪಡುತ್ತವೆ.

**(1899)** ಹರ್ಝ್‌ರತ್ ಅಬೂ ಹುರೈರ(ರ) ವರದಿ ಮಾಡುತ್ತಾರೆ ರಸೂಲುಲ್ಲಾಹ್(ಸ) ನುಡಿಯುತ್ತಾರೆ: ರಮಝಾನ್‌ನ ಮಾಸ ಬಂದಾಗ, ಸ್ವರ್ಗದ ದ್ವಾರಗಳು ತೆರೆಯಲ್ಪಡುತ್ತವೆ ಮತ್ತು ನರಕದ ಬಾಗಿಲುಗಳು ಮುಚ್ಚಲ್ಪಡುತ್ತವೆ ಮತ್ತು ಶೈತಾನರನ್ನು ಸರಪಳಿಯಲ್ಲಿ ಬಂಧಿಸಲಾಗುತ್ತದೆ.

**(1901)** ಹರ್ಝ್‌ರತ್ ಅಬೂ ಹುರೈರ(ರ) ವರದಿ ಮಾಡುತ್ತಾರೆ ರಸೂಲುಲ್ಲಾಹ್(ಸ) ನುಡಿಯುತ್ತಾರೆ: ಯಾವ ವ್ಯಕ್ತಿ ಲೈಲತುಲ್ ಖದರ್‌ನಲ್ಲಿ ಪ್ರತಿಫಲದ ಉದ್ದೇಶದಿಂದ ಆರಾಧನೆಗೆ ನಿಲ್ಲುತ್ತಾನೋ, ಅವನ ಹಿಂದಿನ ಹಾಗೂ ಮುಂದಿನ ಪಾಪಗಳನ್ನು ಕ್ಷಮಿಸಲಾಗುವುದು ಮತ್ತು ಯಾರು ರಮಝಾನಿನ ಉಪವಾಸಗಳನ್ನು ಪ್ರತಿಫಲದ ಉದ್ದೇಶದಿಂದ ಇರಿಸುತ್ತಾನೋ ಅವನ ಎಲ್ಲಾ ಪಾಪಗಳನ್ನು ಕ್ಷಮಿಸಲಾಗುವುದು.

### ಉಪವಾಸಕ್ಕೆ ಸುಳ್ಳು ಹಾನಿಕಾರಕ ವಿಷವಾಗಿದೆ

(1903) ಹರ್ಝ್‌ರತ್ ಅಬುಹುರೈರಾ(ರ) ಅವರು ವರದಿ ಮಾಡುತ್ತಾರೆ ರಸೂಲುಲ್ಲಾಹ್(ಸ) ಹೇಳಿದರು: ಒಬ್ಬ ವ್ಯಕ್ತಿ ಸುಳ್ಳು ಹೇಳುವುದನ್ನು ಮತ್ತು ಸುಳ್ಳನ್ನು ಅಭ್ಯಾಸ ಮಾಡುವುದನ್ನು ನಿಲ್ಲಿಸದಿದ್ದರೆ, ಅಂತಹ ವ್ಯಕ್ತಿಯು ಅಲ್ಲಾಹನಿಗೋಸ್ಕರ ತಿನ್ನುವುದು ಮತ್ತು ಕುಡಿಯುವುದನ್ನು ನಿಲ್ಲಿಸುವ ಅಗತ್ಯವಿಲ್ಲ.

**(ಸಹೀಹ್ ಬುಖಾರಿ, ಸಂಪುಟ 3, ಕಿತಾಬುಸ್ಸೌಮ್, 2008 ಖಾದಿಯಾನ್‌ನಲ್ಲಿ ಪ್ರಕಟಿತ)**

**ಪ್ರೀತಿ ಎಲ್ಲರಲ್ಲೂ, ದ್ವೇಷವಿಲ್ಲ ಯಾರಲ್ಲೂ**

**Love for All, Hatred for None**

يٰۤاَيُّهَا الَّذِيْنَ اٰمَنُوْا كُتِبَ عَلَيْكُمُ الصِّيَامُ

**ಎಲ್ಲೈ ವಿಶ್ವಾಸಿಗಳೇ, ನಿಮ್ಮ ಪೂರ್ವಜರಿಗೆ ವಿಧಿಸಲಾದಂತೆ ನಿಮಗೆ ಸಹ ವ್ರತಾನುಷ್ಠಾನವನ್ನು ವಿಧಿಸಲಾಗಿದೆ!!**

وَاَنْ تَصُوْمُوْا خَيْرٌ لَّكُمْ اِنْ كُنْتُمْ تَعْلَمُوْنَ

**ನೀವು ಗ್ರಹಿಸುವಿರಾದರೆ ವ್ರತಾನುಷ್ಠಾನ ನಿಮಗೆ ಗುಣಕರವಾಗಿದೆ.**

يٰۤاَيُّهَا الَّذِيْنَ اٰمَنُوْا كُتِبَ عَلَيْكُمُ الصِّيَامُ كَمَا كُتِبَ عَلَى الَّذِيْنَ مِنْ قَبْلِكُمْ لَعَلَّكُمْ تَتَّقُوْنَ ۙ اَيَّامًا مَّعْدُوْدٰتٍ ؕ فَمَنْ كَانَ مِنْكُمْ مَّرِيْضًا اَوْ عَلٰى سَفَرٍ فَعِدَّةٌ مِّنْ اَيَّامٍ اُخَرَ ؕ وَعَلَى الَّذِيْنَ يُطِيْقُوْنَهٗ فِدْيَةٌ طَعَامُ مِسْكِيْنٍ ؕ فَمَنْ تَطَوَّعَ خَيْرًا فَهُوَ خَيْرٌ لَّهٗ ؕ وَاَنْ تَصُوْمُوْا خَيْرٌ لَّكُمْ اِنْ كُنْتُمْ تَعْلَمُوْنَ (بقرہ: 184-185)

ಅಂದರೆ :: ಎಲ್ಲೈ ವಿಶ್ವಾಸಿಗಳೇ, ನಿಮ್ಮ ಪೂರ್ವಜರಿಗೆ ವಿಧಿಸಲಾದಂತೆ ನಿಮಗೆ ಸಹ ವ್ರತಾನುಷ್ಠಾನವನ್ನು ವಿಧಿಸಲಾಗಿದೆ – ನೀವು (ನೈತಿಕ ಮತ್ತು ಆಧ್ಯಾತ್ಮಿಕ ನ್ಯೂನತೆಗಳಿಂದ ಸುರಕ್ಷಿತರಾಗುವಂತೆ) ದೋಷಬಾಧೆಯ ಬಗ್ಗೆ ಜಾಗರೂಕರಾಗಲಿಕ್ಕೋಸ್ಕರ. (ಈ ಉಪವಾಸವನ್ನು) ಕೆಲವು ನಿರ್ದಿಷ್ಟ ದಿನಗಳಲ್ಲಿ ಅನುಷ್ಠಿಸಬೇಕಾಗಿದೆ. ಆದರೆ ನಿಮ್ಮಲ್ಲಿ ಯಾರಾದರೂ ರೋಗಿ ಅಥವಾ ಯಾತ್ರಿಕನಾಗಿದ್ದರೆ ಬೇರೆ ದಿನಗಳಲ್ಲಿ ಸಂಖ್ಯೆಯನ್ನು ಪೂರ್ಣಗೊಳಿಸಲಿ. (ಉಪವಾಸ ಮಾಡಲು ದೈಹಿಕ ನಿಶ್ಶಕ್ತಿಯಿದ್ದು ಆರ್ಥಿಕವಾಗಿ) ಸಮರ್ಥರಿದ್ದರೆ ಅವರು ಪ್ರಾಯಶ್ಚಿತ್ತವಾಗಿ ಒಬ್ಬ ನಿರ್ಗತಿಕನಿಗೆ ಆಹಾರವನ್ನು ನೀಡಬೇಕಾಗಿದೆ. ಇನ್ನು ಯಾರಾದರೂ ಪೂರ್ಣವಾದ ಅನುಸರಣೆಯನ್ನು ತೋರಿಸುತ್ತಾ ಏನಾದರೂ ಒಳಿತನ್ನು ಮಾಡುವುದಾದರೆ ಅದು ಆತನಿಗೆ ಉತ್ತಮ. ನೀವು ಗ್ರಹಿಸುವಿರಾದರೆ ವ್ರತಾನುಷ್ಠಾನ ನಿಮಗೆ ಗುಣಕರವಾಗಿದೆ.

## ಈ ತಿಂಗಳು ಹೃದಯದ ಜ್ಞಾನೋದಯಕ್ಕೆ ಉತ್ತಮ ತಿಂಗಳು ಎಂದು ಸೋಫಿಯರು ಬರೆಯುತ್ತಾರೆ, ಇದರಲ್ಲಿ ಹೆಚ್ಚುಹೆಚ್ಚಾಗಿ ದಿವ್ಯಜ್ಞಾನ ಪ್ರಕಟಗೊಳ್ಳುತ್ತದೆ. ಸಲಾತ್ ಆತ್ಮವನ್ನು ಶುದ್ಧಗೊಳಿಸುತ್ತದೆ ಮತ್ತು ಉಪವಾಸವು ಹೃದಯವನ್ನು ಸಾಕ್ಷಾತ್ಕಾರಗೊಳಿಸುತ್ತದೆ

**ಸಯ್ಯದುನಾ ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

ಮಗ್ರಿಬ್ ನಮಾಝಿನ ಕೆಲವು ನಿಮಿಷಗಳ ಮೊದಲು ಪವಿತ್ರ ರಂಝಾನ್ ತಿಂಗಳ ಚಂದ್ರನ ದರ್ಶನವಾಯಿತು. ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮಗ್ರಿಬ್ ನಮಾಝ್ ನಿರ್ವಹಿಸಿ ಮಸೀದಿಯ ಛಾವಣಿಯ ಮೇಲೆ ಚಂದ್ರನನ್ನು ನೋಡಲು ಹೋಗಿ ಚಂದ್ರನನ್ನು ನೋಡಿ ಪುನಃ ಮಸೀದಿಗೆ ತೆರಳಿ ಹೇಳಿದರು: ಕಳೆದ ರಂಝಾನ್ ನಿನ್ನೆ ಕಳೆದುಹೋದಂತೆ ತೋರುತ್ತದೆ, **ಶಹರು ರಮಝಾನಲ್ಲಝೀ ಉನ್‌ಝಿಲ ಫೀಹಿಲ್ ಖುರ್‌ಆನ್** ಪವಿತ್ರ ಖುರ್‌ಆನಿನಲ್ಲಿ ಪ್ರಕಟವಾದ ರಮಝಾನ್ ತಿಂಗಳ ಹಿರಿಮೆಯನ್ನು ತೋರಿಸುವ ನುಡಿಗಟ್ಟು ಕೂಡ ಆಗಿದೆ. ಈ ತಿಂಗಳು ಹೃದಯ ಜ್ಞಾನೋದಯಕ್ಕೆ ಉತ್ತಮ ತಿಂಗಳು ಎಂದು ಸೂಫಿಯರು ಬರೆಯುತ್ತಾರೆ. ಮತ್ತು ಇದರಲ್ಲಿ ಹೆಚ್ಚುಹೆಚ್ಚಾಗಿ ದಿವ್ಯಜ್ಞಾನ ಪ್ರಕಟಗೊಳ್ಳುತ್ತದೆ, ಸಲಾತ್ ಆತ್ಮವನ್ನು ಶುದ್ಧಗೊಳಿಸುತ್ತದೆ ಮತ್ತು ಉಪವಾಸವು ಹೃದಯವನ್ನು ಸಾಕ್ಷಾತ್ಕಾರಗೊಳಿಸುತ್ತದೆ. ಆತ್ಮ ಶುದ್ಧಿ ಎಂದರೆ ದುಷ್ಪ್ರೇರಕ ಆತ್ಮವು ಕಾಮೇಚ್ಛೆಗಳಿಂದ ದೂರ ಉಳಿಯುವುದು ಮತ್ತು ಹೃದಯವು ಸಾಕ್ಷಾತ್ಕಾರಗೊಳ್ಳುವುದು ಎಂದರೆ ಅದೃಶ್ಯ ವಿಷಯಗಳ ಬಾಗಿಲು ಅವನ ಮೇಲೆ ತೆರೆಯಲಾಗುವುದು ಅದರಿಂದ ಅವನು ಅಲ್ಲಾಹನನ್ನು ನೋಡುವನು. ಹೀಗಾಗಿ **ಉನ್‌ಝಿಲ ಫೀಹಿಲ್ ಖುರ್‌ಆನ್** ನಲ್ಲಿ ಇದನ್ನೆ ಸೂಚಿಸಲಾಗಿದೆ. ಉಪವಾಸದ ಪ್ರತಿಫಲವು ದೊಡ್ಡದಾಗಿದೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ, ಆದರೆ ರೋಗಗಳು ಮತ್ತು ಕಾಯಿಲೆಗಳು ಈ ಅನುಗ್ರಹದಿಂದ ಮನುಷ್ಯನನ್ನು ಕಸಿದುಕೊಳ್ಳುತ್ತವೆ, ನನ್ನ ಯೌವನದಲ್ಲಿ ನಾನು ಒಮ್ಮೆ ಉಪವಾಸವನ್ನು ಸುನ್ನತ್ ಅಹ್ಲುಲ್ ಬೈತ್ ಎಂದು ಕನಸು ಕಂಡೆ ಎಂದು ನನಗೆ ನೆನಪಿದೆ, ನನ್ನ ಬಗ್ಗೆ ದೇವರ ಪ್ರವಾದಿ ಹೇಳಿದರು: **ಸಲ್ಮಾನು ಮಿನ್ನಾ ಅಹ್ಲಲ್ ಬೈತಿ**– ಸಲ್ಮಾನ್ ಅಂದರೆ **ಅಸ್ಸುಲ್‌ಹಾನ್** ಅಂದರೆ ಆ ವ್ಯಕ್ತಿಯಿಂದ ಎರಡು ಸಂಧಾನಗಳು ನಡೆಯುವುವು. ಒಂದು ಆಂತರಿಕ, ಇನ್ನೊಂದು

*(ಪುಟ ಸಂಖೆ 08 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

ವಾಕ್ಚಾತುರ್ಯವೂ ಇದೆ, ಸತ್ಯವೂ ಇದೆ, ಬುದ್ಧಿವಂತಿಕೆಯ ಮಾತುಗಳೂ ಇವೆ, ಈ ಪವಾಡಗಳು ಪವಿತ್ರ ಖುರ್‌ಆನ್‌ನಲ್ಲಿ ಮಾತ್ರ ಇವೆ.

ಕ್ರೈಸ್ತರು ಪಾಲಿಸುವ ಹೆಮ್ಮೆಪಡುವ ಎಲ್ಲಾ ವಿಷಯಗಳು ಪವಿತ್ರ ಖುರ್‌ಆನ್‌ನಲ್ಲಿ ಪರಿಪೂರ್ಣ ರೀತಿಯಲ್ಲಿ ಪ್ರಸ್ತಾಪಿಸಲ್ಪಟ್ಟಿದೆ.

ಹದೀಸ್ ಖಾಝಿ (ನ್ಯಾಯಧೀಶ) ಅಲ್ಲ, ಅದರೆ ಪವಿತ್ರ ಖುರ್‌ಆನ್ ಅದರ ಮೇಲೆ ಖಾಝಿ (ನ್ಯಾಯದೀಶ) ವಾಗಿದೆ. (ಹಝ್ರತ್ ಮಸೀಹ್ ಮೌಊದ್[ಅ])

ಪವಿತ್ರ ಖುರ್‌ಆನ್‌ನಲ್ಲಿ ಅವತರಿಸಿದ ಎಲ್ಲಾ ನಿರ್ದೇಶನಗಳನ್ನು ಹಝ್ರತ್ ಪೈಗಂಬರ್[ಸ] ಅದನ್ನು ಅದರಂತೆ ನಡೆದು ತೋರಿಸಿದ್ದಾರೆ. ಹೀಗೆ ಎಲ್ಲರಿಗೂ ಒಂದು ಮಾದರಿಯನ್ನು ತೋರ್ಪಡಿಸಿದ್ದಾರೆ. ಈ ಮಾದರಿ ಇಲ್ಲದಿರುತ್ತಿದ್ದರೆ ಇಸ್ಲಾಂ ತಿಳಿದುಕೊಳ್ಳುವುದು ಸಾಧ್ಯವಿರಲಿಲ್ಲ, ಆದುದರಿಂದ ಪವಿತ್ರ ಖುರ್‌ಆನ್ ಮುಖ್ಯವಾಗಿದೆ. (ಹಝ್ರತ್ ಮಸೀಹ್ ಮೌಊದ್[ಅ])

ಪವಿತ್ರ ಖುರ್‌ಆನ್‌ನಲ್ಲಿ ಅವತರಿಸಿದ ಎಲ್ಲಾ ನಿರ್ದೇಶನಗಳನ್ನು ಹಝ್ರತ್ ಪೈಗಂಬರ್[ಸ] ಅದನ್ನು ಅದರಂತೆ ನಡೆದು ತೋರಿಸಿದ್ದಾರೆ. ಹೀಗೆ ಎಲ್ಲರಿಗೂ ಒಂದು ಮಾದರಿಯನ್ನು ತೋರ್ಪಡಿಸಿದ್ದಾರೆ. ಈ ಮಾದರಿ ಇಲ್ಲದಿರುತ್ತಿದ್ದರೆ ಇಸ್ಲಾಂ ತಿಳಿದುಕೊಳ್ಳುವುದು ಸಾಧ್ಯವಿರಲಿಲ್ಲ, ಆದುದರಿಂದ ಪವಿತ್ರ ಖುರ್‌ಆನ್ ಮುಖ್ಯವಾಗಿದೆ. (ಹಝ್ರತ್ ಮಸೀಹ್ ಮೌಊದ್[ಅ])

ಪವಿತ್ರ ಖುರ್‌ಆನ್ ಶ್ರೇಷ್ಠತೆವೇನೆಂದರೆ ಅದರಲ್ಲಿ ಎಲ್ಲಾ ಪದಗಳು ಮುತ್ತಿನಂತೆ ಪೋಣಿಸಲಾಗಿದೆ ಮತ್ತು ಅವುಗಳನ್ನು ಸೂಕ್ತ ಸ್ಥಳಗಳಲ್ಲಿ ಇರಿಸಲಾಗಿದೆ. ಅದನ್ನು ಯಾವುದೇ ಪದವಾಗಲಿ ಒಂದು ಸ್ಥಳದಿಂದ ತೆಗೆದು ಇನ್ನೊಂದು ಸಥಳದಲ್ಲಿ ಇರಿಸಲು ಸಾಧ್ಯವಿಲ್ಲ. ಬದಲಾವಣೆಯು ಮಾಡುವಂತಹದ್ದಲ್ಲ. ಅದಾಗ್ಯು ಪ್ರಾಸ ಮತ್ತು ವಾಕ್ಚಾತುರ್ಯದ ಎಲ್ಲಾ ಅಗತ್ಯಗಳನ್ನು ಪೂರೈಸಲಾಗಿದೆ. (ಹಝ್ರತ್ ಮಸೀಹ್ ಮೌಊದ್[ಅ])

"ಪ್ರಸ್ತುತ ಯಾವ ಧರ್ಮವು ಅಂತಹದ್ದಿಲ್ಲ, ಅದರ ಅನುಯಾಯಿಗಳು ಅದರ ಸಾಕ್ಷ್ಯಗಳನ್ನು ಸಾದರಪಡಿಸಲು ಭವಿಷ್ಯವಾಣಿಗಳನ್ನು ನುಡಿಯಬೇಕು. ಅಥವಾ ಅವನಿಂದ ಪವಾಡ ಸೃಷ್ಟಿಯಾಗಬೇಕು. ಆದುದರಿಂದ ಈ ನೆಲೆಯಲ್ಲಿ ಪವಿತ್ರ ಖುರ್‌ಆನ್‌ನ ವೈಶಿಷ್ಟ್ಯ ಎಲ್ಲಾ ಗ್ರಂಥಗಳಿಂದಲೂ ಮೇಲಾಗಿದೆ."

ಪವಿತ್ರ ಖುರ್‌ಆನ್‌ನ ಹೆಮ್ಮೆಯೆಂದರೆ ಅದು ಅನ್ಯಧರ್ಮಿಯರ ತಪ್ಪು ಬೋಧನೆಗಳನ್ನು ರದ್ದುಪಡಿಸುತ್ತದೆ ಮತ್ತು ಅವರ ನಿಜವಾದ ಬೋಧನೆಗಳನ್ನು ಸ್ಪಷ್ಟಪಡಿಸುತ್ತದೆ ಮತ್ತು ಅದನ್ನು ಪ್ರಸ್ತುತಪಡಿಸುತ್ತದೆ. (ಹಝ್ರತ್ ಮಸೀಹ್ ಮೌಊದ್[ಅ])

ತುಂಬಾ ಸರಳವಾದ ವಿಧನವಿದೆ, ಅನುಸರಿಸುವ ನಿರ್ದೇಶನಗಳಿವೆ, ನಿಮಗೆ ಸ್ಪಷ್ಟವಾಗಿ ಕಾಣುತ್ತವೆ. ಅದರ ಮೇಲೆ ನಡೆದುಕೊಳ್ಳಿ, ಯಾವುದರಿಂದ ನಿಷೇಧ ಹಾಕಲಾಗಿದೆ. ಅದರಿಂದ ದೂರವಿರಿ. ಅದರಿಂದ ಅಲ್ಲಾಹನು ಸಂತುಷ್ಟನಾಗುವನು.

ಪವಿತ್ರ ಖುರ್‌ಆನ್ ಸುಲಭವಗಿ ಅರ್ಥ ಮಾಡಿಕೊಳ್ಳುವ ಪುಸ್ತಕವಾಗಿದೆ.

ಜಲ್ಲ ಸಾಲಾನ ಬಾಂಗ್ಲಾದೇಶದ ಹಲ್ಲೇಕೋರರ ಹಲ್ಲೆಗಳಿಗೆ ಒಳಗಾಗಿ ಹುತಾತ್ಮರಾಗುವ ಮಾನ್ಯ ಝಾಹಿದ್ ಹುಸೇನ್ ಸಹಿಬ್, ಅಲ್ಲದೇ ಮಾನ್ಯ ಕಮಾಲ್ ಬಿದಾಹ್ ಸಹಿಬ್ ಆಫ್ ಅಲ್ ಜಝಾಯಿರ್, ಡಾ॥ ಶಮೀಮಿ ಅಹ್ಮದ್ ಮಲಿಕ್ ಸಾಹಿಬ ಆಫ್ ಕೆನಡಾ, ಮಾನ್ಯ ಫರ್ಹಾದ್ ಅಹ್ಮದ್ ಅಮೀನಿ ಸಾಹಿಬ್ ಆಫ್ ಜರ್ಮನಿ ಮತ್ತು ಮಾನ್ಯ ಚೌಧರಿ ಜಾವೇದ್ ಅಹ್ಮದ್ ಬಸ್ಮಿಲ್ ಸಾಹಿಬ್ ಆಫ್ ಕೆನಡಾ ಇವರೆಲ್ಲರ ಸದ್ಗುಣಗಳ ಪ್ರಸ್ತಾವನೆ ಹಾಗೂ ನಮಾಝೆ ಜನಾಝ ನಿರ್ವಹಣೆ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಟಿಲ್‌ಫೋರ್ಡ್, ಯು.ಕೆ, ಇಸ್ಲಾಮಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **10–03–2023** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُولُهٗ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಇತ್ತೀಚೆಗೆ ಖುತುಬಗಳಲ್ಲಿ ನಾನು ಪವಿತ್ರ ಖುರ್‌ಆನ್‌ನ ಶ್ರೇಷ್ಠತೆ ಮತ್ತು ಅದರ ಒಳಿತುಗಳ ಬಗ್ಗೆ ಪ್ರಸ್ತಾಪ ಮಾಡುತ್ತಾ ಇದ್ದೇನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪವಿತ್ರ ಖುರ್‌ಆನ್‌ನ ಶ್ರೇಷ್ಠತೆ ಮತ್ತು ಒಳಿತುಗಳ ಬಗ್ಗೆ ವಿವರಿಸುತ್ತಾ ಹೀಗೆ ಹೇಳಿದರು. ನಾನು ಸತ್ಯವಾಗಿ ಹೇಳುತ್ತಿದ್ದೇನೆ. ಪವಿತ್ರ ಖುರ್‌ಆನ್ ಎಂತಹ ಪರಿಪೂರ್ಣ ಮತ್ತು ಸಮಗ್ರವಾದ ಗ್ರಂಥವಾಗಿದೆ ಎಂದರೆ ಯಾವುದೇ ಗ್ರಂಥ ಅದನ್ನು ಎದುರಿಸಲು ಸಮರ್ಥವಾಗಲಾರದು. ಅವರು ಉದಾಹರಣೆ ನೀಡುತ್ತಾ ಹೇಳಿದರು. ಪವಿತ್ರ ಖುರ್‌ಆನ್‌ನ ವಚನ **ಹುದನ್‌ಲಿಲ್ ಮುತ್ತಖೀನ್** (ಭಯ ಭಕ್ತಿಯುಳ್ಳವರಿಗೆ ಮಾರ್ಗದರ್ಶನ ನೀಡುತ್ತದೆ) ಎಂಬ ವಚನಕ್ಕೆ ಸಮಾನವಾದ ಶೃತಿ ವೇದದಲ್ಲಿ ಇದೆಯೇ? ಕೇವಲ ಬಾಯಿಮಾತಿನಲ್ಲಿ ಹೇಳುವುದು ಮಾತ್ರ ಮಹತ್ವಪೂರ್ಣವಾಗುವುದಾದರೆ ಮತ್ತು ಅದಕ್ಕೆ ಫಲಗಳು ಮತ್ತು ಪರಿಣಾಮಗಳ ಅವಶ್ಯಕತೆ ಇಲ್ಲವಾದರೆ, ಲೋಕವಿಡೀ ಯಾವುದಾದರೂ ರೀತಿಯಲ್ಲಿ ದೇವನ ಅಸ್ತಿತ್ವವನ್ನು ಅಂಗೀಕರಿಸುತ್ತದೆ ಎಂದು ಹೇಳಬೇಕಾಗುತ್ತದೆ. ಭಕ್ತಿ ಆರಾಧನೆ ದಾನಧರ್ಮಗಳನ್ನು ಒಳ್ಳೆಯದೆಂದು ಭಾವಿಸುತ್ತದೆ ಎಂದು. ಯಾವುದಾದರೂ ರೀತಿಯಲ್ಲಿ ಅವುಗಳನ್ನು ಮಾಡುತ್ತವೆ ಎಂದೂ ಹೇಳಬೇಕಾದೀತು. ಹಾಗಾದರೆ ವೇದಗಳು ಬಂದು ಲೋಕಕ್ಕೆ ಏನು ನೀಡಿದೆ? ಹೀಗೆ ಹಿಂದೂಗಳಿಗೆ ಉತ್ತರವನ್ನು ನೀಡುತ್ತಿದ್ದರು. "ಒಂದು ಸಾಬೀತುಪಡಿಸಿರಿ. ವೇದಗಳನ್ನು ನಂಬದ ಸಮುದಾಯಗಳು ಅವರಲ್ಲಿ ಯಾವುದೇ ರೀತಿಯಲ್ಲಿ ಒಳಿತುಗಲಿಲ್ಲ ಅಥವಾ ಯಾವುದೊಂದು ಭಿನ್ನ ರೀತಿಯ ದೃಷ್ಟಾಂತ ತೋರಿಸಿ. ಹೇಳುತ್ತಾರೆ. ಪವಿತ್ರ ಖುರ್‌ಆನ್ ಅದರ ಆರಂಭದಲ್ಲಿಯೇ ಆತ್ಮವು ಅವಶ್ಯಪಡುವ ಅಭಿವೃದ್ಧಿಗಳನ್ನು ನೀಡುವ ವಾಗ್ದಾನ ನೀಡುತ್ತದೆ. ಅಂದಹಾಗೆ ಸೂರತುಲ್ ಫಾತಿಹದಲ್ಲಿ **ಇಹ್‌ದಿನಸೆಸಿರಾತಲ್ ಮುಸ್ತಖೀಮ್** (ಅಲ್‌ಫಾತಿಹ–6) ಎಂದು ಹೇಳಿ ಹೀಗೆ ನಿರ್ದೇಶಿಸಿದೆ ಹೇ ಅಲ್ಲಾಹ್ ನೀನು ನಮ್ಮನ್ನು ನೇರ ಮಾರ್ಗದಲ್ಲಿ ನಡೆಸು. ನೇರ ಮಾರ್ಗದಲ್ಲಿ ನಡೆಸಲು ಪ್ರಾರ್ಥಿಸಿದರೆ ನೇರ ಮಾರ್ಗದಲ್ಲಿ ನಡೆಸುವೆನು ಎಂದು ಸಹ ಅಲ್ಲಾಹನು ವಾಗ್ದಾನ ಮಾಡಿದ್ದಾನೆ. ನೇರ ಮಾರ್ಗ ಅಲ್ಲಾಹನಿಂದ ಅನುಗ್ರಹಗಳನ್ನು ಗಳಿಸಿದವರ ಮಾರ್ಗವಾಗಿದೆ. ಈ ಪ್ರಾರ್ಥನೆ ಕಲಿಸಿದ ನಂತರ ಸೂರತುಲ್ ಬಖರದ ಆರಂಭದಲ್ಲೇ ಹೀಗೆ ಶುಭವಾತೆಯನ್ನು ಅಲ್ಲಾಹನು ನೀಡಿದ್ದಾನೆ. **ಝಾಲಿಕಲ್ ಕಿತಾಬು**

**ಲಾ ರೈಬ ಫೀಹೀ ಹುದನ್‌ಲಿಲ್ ಮುತ್ತಖೀನ್** (ಅಲ್-ಬಖರ-3) ನೇರ ಮಾರ್ಗದಲ್ಲಿ ನಡೆಸಲು ಪ್ರಾರ್ಥಿಸಬೇಕೆಂದು ಅಲ್ಲಾಹನು ಕಲಿಸಿರುವವನಲ್ಲದೇ ನೇರ ಮಾರ್ಗವನ್ನು ಗಳಿಸಲು ಒಂದು ಕಾರ್ಯಸೂಚಿಯನ್ನು ಸಹ ತಿಳಿಸಿರುವನು. ಆ ಕಾರ್ಯಸೂಚಿ ಪ್ರಕಾರ ವರ್ತಿಸುವ ಭಯಭಕ್ತಿಯುಳ್ಳವರಿಗೆ ನೇರ ಮಾರ್ಗ ಲಭಿಸುವುದು ಎಂದರೆ ಆತ್ಮಗಳು ನೇರಮಾರ್ಗವನ್ನು ದಯಪಾಲಿಸಬೇಕೆಂದು ಯಾಚಿಸುವಾಗ ಆ ಯಾಚನೆಯು ಅಂಗೀಕಾರಗೊಂಡ ಬಗ್ಗೆ ಪ್ರಭಾವ ತೋರಿಸುತ್ತದೆ. ಅಲ್ಲಾಹನ ಆ ವಾಗ್ದಾನ ಪವಿತ್ರ ಖುರ್‌ಆನ್ ಅವತೀರ್ಣವಾಗುವ ಮೂಲಕ ಈಡೇರುತ್ತದೆ. ಇದು ಅಲ್ಲಾಹನು ನೀಡಿದ ಅನುಗ್ರಹವಾಗಿದೆ. ಆದರೆ ಖೇದಕರವಾದುದೇನೆಂದರೆ ಲೋಕವು ಅದರ ಬಗ್ಗೆ ಅರಿವಿಲ್ಲದಾಗಿದೆ ಮತ್ತು ಶ್ರದ್ಧಾರಹಿತವಾಗಿದೆ. ಅದರಿಂದ ದೂರವಾದ ಕಾರಣ ನಾಶವಾಗುತ್ತಿದೆ."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ ನಾನು ಪುನಃ ಹೇಳುತ್ತೇನೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಮುತ್ತಖೀಗಳ (ಭಯಭಕ್ತಿಯುಳ್ಳವರ) ಗುಣಗಳನ್ನು ವಿವರಿಸಿದ್ದಾನೆ. ಅವುಗಳನ್ನು ಸಾಮಾನ್ಯ ಗುಣಗಳ ರೂಪದಲ್ಲಿ ಇರಿಸಿದ್ದಾನೆ. ಆದರೆ ಮನುಷ್ಯನು ಅವುಗಳನ್ನು ನಂಬಿ ನೇರವಾರ್ಗ ಗಳಿಸಲು ತನ್ನ ವಾರ್ಗಸೂಚಿಯನ್ನಾಗಿ ಮಾಡಿಕೊಳ್ಳುವುದಾದರೆ ಅಂತಹ ವ್ಯಕ್ತಿ ಮಾರ್ಗದರ್ಶನವನ್ನು ಗಳಿಸಿದವರಲ್ಲಿ ಅತ್ಯುನ್ನತ ಸ್ಥಾನವನ್ನು ಗಳಿಸುವವನಾಗುತ್ತಾನೆ. **ಹುದನ್ ಲಿಲ್ ಮುತ್ತಖೀನ್** ಎನ್ನುವದರ ಉದ್ದೇಶ ಲಕ್ಷ್ಯ ಅದೇ ಆಗಿರುತ್ತದೆ. ಪವಿತ್ರ ಖುರ್‌ಆನ್‌ನ ಈ ಉದ್ದೇಶ ಲಕ್ಷ್ಯದಿಂದ ಬರುವ ಸಂತೋಷವು ನಾವು ಪದಗಳಲ್ಲಿ ವಿವರಿಸಲು ಸಾಧ್ಯವಿಲ್ಲ. ಏಕೆಂದರೆ ಇದರಿಂದ ಅಲ್ಲಾಹನ ವಿಶೇಷವಾದ ಅನುಗ್ರಹ ಮತ್ತು ಪವಿತ್ರ ಖುರ್‌ಆನ್‌ನ ಪರಿಪೂರ್ಣತೆಯ ಪುರಾವೆ ಸಿಗುತ್ತದೆ. (ಮಲ್ಫೂಝಾತ್ ಸಂ. 8, ಪುಟ-317-318, ಸಂಚಿಕೆ-1984)

ಮತ್ತು ಈ ಮಾತುಗಳಿಗೆ ವಿಶ್ಲೇಷಣೆ ನೀಡುತ್ತಾ ಎಂದರೆ ಪವಿತ್ರ ಖುರ್‌ಆನ್ ಒಂದು ಪರಿಪೂರ್ಣ ಗ್ರಂಥವಾಗಿದೆ ಎಂಬುದರ ಬಗ್ಗೆ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಪವಿತ್ರ ಖುರ್‌ಆನ್‌ನ ಉಪದೇಶಗಳು ಪರಿಪೂರ್ಣವಾಗಿರುವ ಉಪದೇಶಗಳಾಗಿವೆ. ಆ ಕಾಲಘಟ್ಟದ ಅವಶ್ಯಕತೆ ಹಝ್ರತ್ ಮುಹಮ್ಮದ್(ಸ) ರವರ ಸತ್ಯತೆಗೆ ಇನ್ನೊಂದು ಸಾಕ್ಷ್ಯಾಧಾರವಾಗಿದೆ. **ಅಲ್‌ಯೌಮ ಅಕ್‌ಮಲ್ತು ಲಕುಮ್** ಈ ದಿನ ನಿಮಗೆ ಪರಿಪೂರ್ಣಗಳಿಸಿದ್ದೇನೆ ಎಂಬ ವಚನಚದಲ್ಲಿ ಹಝ್ರತ್ ಮುಹಮ್ಮದ್ (ಸ) ರ ಆಗಮನವನ್ನು ಒಂದು ಸಾಕ್ಷ್ಯಾಧಾರವಾಗಿ ಸೂಚಿಸಲಾಗಿದೆ. ಇದು ನುಬುವತ್ತಿನ ಎರಡನೆಯ ಹಂತವಾಗಿದೆ. ಕೇವಲ ವಚನಗಳು ಅವತೀರ್ಣವಾಗಿರುವುದರಿಂದ ಪರಿಪೂರ್ಣತೆ ಲಭಿಸುವುದಿಲ್ಲ. ಆತ್ಮ ಪರಿಪೂರ್ಣತೆ, ಹೃದಯದ ಶುದ್ಧೀಕರಣ ಮನುಷ್ಯನ ಸ್ಥಿತಿಯನ್ನು ಪರಿಪೂರ್ಣಗೊಳಿಸುತ್ತದೆ. ಕಾಡು ಮನುಷ್ಯನು ಮನುಷ್ಯನಾಗುತ್ತಾನೆ. ಬುದ್ಧಿಶಾಲಿಯು ಸದ್ಗುಣ ಸಂಪನ್ನನೂ, ದೇವಭಯವುಳ್ಳವನೂ ಆಗುತ್ತಾನೆ. ಪವಿತ್ರ ಖುರ್‌ಆನ್ ಮನುಷ್ಯನಿಗೆ ಸಂಸ್ಕೃತಿಯನ್ನೂ ಆತ್ಮವನ್ನು ಶುದ್ಧೀಕರಿಸಿ ಉನ್ನತ ಸ್ಥಾನ ಗಳಿಸುವ ವಿಧಾನವನ್ನು ಕಲಿಸಿತು. ಅಲ್ಲಾಹನ ಗ್ರಂಥ ಸಹ ಪರಿಪೂರ್ಣಗೊಳಿಸಲ್ಪಟ್ಟನು. ಪವಿತ್ರ ಖುರ್‌ಆನ್‌ನಲ್ಲಿ ಅಡಕವಾಗಿಲ್ಲದ ಯಾವ ಸತ್ಯವೂ ಇಲ್ಲ. ನಾನು ಅಗ್ನಿಹೋತ್ರಿಯವರಿಗೆ ಈ ಪೈಕಿ ಎಷ್ಟು ಸಲ ಹೇಳಿದ್ದೇನೆ. ಅವರು ಹಿಂದೂ ಸಮಾಜದ ಒಂದು ಸಂಘಟನೆಯ ಸ್ಥಾಪಕರಾಗಿದ್ದರು. ಮೊದಲು ಅವರು ಬೇರೊಂದು ಪಂಥದಲ್ಲಿದ್ದರು. ಮತ್ತು ಅವರು ಸ್ವಯಂ ತನ್ನ ಒಂದು ಪಂಥವನ್ನು ಪ್ರಾರಂಭಿಸಿದರು. ಒಟ್ಟಿನಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಅವರೊಂದಿಗೆ ಹೆಚ್ಚಾಗಿ ಚರ್ಚೆಗಳು ನಡೆಯುತ್ತಿದ್ದವು. ನಾನು ಅವರಿಗೆ ಎಷ್ಟೋ ಸಲ ಹೇಳಿದ್ದೇನೆ. ಪವಿತ್ರ ಖುರ್‌ಆನ್‌ನಲ್ಲಿ ಅಡಕವಾಗಿಲ್ಲದಂತಹ ಯಾವುದೇ ಒಂದು ಸಾಕ್ಷ್ಯವಾದರೂ ತೋರಿಸಿ. ಆದರೆ ಅವರಿಗೆ ತೋರಿಸಲಾಗಲಿಲ್ಲ. ಅಂತಹುದೆ ಒಂದು ಕಾಲ ನನ್ನ ಮೇಲೆಯೂ ಬಂದಿದೆ. ನಾನು ಬೈಬಲ್ ಮುಂದಿಟ್ಟುಕೊಂಡು ನೋಡಿದೆ. ಯಾವ ಮಾತುಗಳ ಬಗ್ಗೆ ಕ್ರೈಸ್ತರು ಹೆಮ್ಮೆಪಡುತ್ತಿದ್ದರು. ಆ ಎಲಾ ಸತ್ಯಗಳು ಶಾಶ್ವತ ರೀತಿಯಲ್ಲಿ ಮತ್ತು ಅತ್ಯಂತ ಪರಿಪೂರ್ಣ ರೀತಿಯಲ್ಲಿ ಪವಿತ್ರ ಖುರ್‌ಆನ್‌ನಲ್ಲಿ ಉಪಸ್ಥಿತವಿದೆ. ಆದರೆ ಖೇದಕರ ವಿಷಯವೆಂದರೆ ಮುಸಲ್ಮಾನರಿಗೆ ಇತ್ತ ಲಕ್ಷ್ಯವಿಲ್ಲ. ಅವರು ಪವಿತ್ರ ಖುರ್‌ಆನ್ ಬಗ್ಗೆ ಚಿಂತಿಸುವುದೇ ಇಲ್ಲ. ಆ ಬಗ್ಗೆ ಅವರಿಗೆ ಗೌರವೂ ಇಲ್ಲ, ಇಲ್ಲದಿದ್ದರೆ ಇದು ನಮಗೆ ಎಂತಹ ಹೆಮ್ಮೆಯ ವಿಷಯವಾಗಿದೆ ಎಂದರೆ, ಇತರರಲ್ಲಿ ಅದರ ಉದಾಹರಣೆ ಸಹ ಇಲ್ಲ. ಅವರು ಹೇಳಿದರು. ಹೀಗೆ **ಅಲ್ ಯೌಮ ಲಕುಮ್ ದೀನುಕುಮ್** (ಅಲ-ಮಾಯಿದಃ-4) ವಚನವು ಎರಡು ಅರ್ಥಗಳನ್ನು ಹೊಂದಿದೆ. ಒಂದೇನೆಂದರೆ ಅದು ನಿಮ್ಮನ್ನು ಶುದ್ಧೀಕರಿಸಿದೆ. ಎರಡನೆಯದಾಗಿ ಇದು ಪರಿಪೂರ್ಣ ಗ್ರಂಥವಾಗಿದೆ. ಅವರು ಮುಂದೆ ಹೇಳುತ್ತಾರೆ. ಈ ವಚನ ಅವತರಿಸಿದ ದಿನ ಶುಕ್ರವಾರವಾಗಿತ್ತು. ಹಝ್ರತ್ ಉಮರ್(ರ) ಅವರೊಡನೆ ಯಹೂದಿನೊಬ್ಬನು ಹೇಳಿದನು. ಈ ವಚನ ಅವತರಿಸಿದ ದಿನ ಹಬ್ಬವಾಗಿ ಆಚರಿಸಬಹುದಾಗಿತ್ತು." ಏಕೆಂದರೆ ಇದು ಪರಿಪೂರ್ಣ ಮತ್ತು ಪ್ರಭಾವಪೂರ್ಣ ಗ್ರಂಥವಾಗಿದೆ. ಹಝ್ರತ್ ಉಮರ್(ರ) ಅವರಿಗೆ ಉತ್ತರ ನಿಡಿದರು. ಶುಕ್ರವಾರ ಹಬ್ಬವೇ ಆಗಿದೆ. ಆದರೆ ಹಲವು ಜನರು ಈ ಹಬ್ಬದ ಬಗ್ಗೆ ತಿಳಿಯದವರಾಗಿದ್ದಾರೆ. ಬೇರೆ ಹಬ್ಬಗಳಲ್ಲಿ ವಸ್ತ್ರಗಳನ್ನು ಬದಲಿಸುತ್ತಾರೆ. ಆದರೆ ಈ ಹಬ್ಬವನ್ನು ಲೆಕ್ಕಿಸುವುದಿಲ್ಲ, ಅದೇ ಹೊಲಸು ಬಟ್ಟೆಗಳಲ್ಲಿ ಬರುತ್ತಾರೆ. ಈ ಮೂಲಕ ಶುಕ್ರವಾರ (ಜುಮುಅ) ದ ಮಹತ್ವವನ್ನು ಸಹ ಉಲ್ಲೇಖಿಸುತ್ತಿದ್ದಾರೆ. ಜುಮುಅ ನಮಗೆ ಎಷ್ಟು ಅವಶ್ಯವಾಗಿದೆ ಎಂದು. ಅವರು(ಅ) ಹೇಳಿದರು. ನನ್ನ ದೃಷ್ಟಿಯಲ್ಲಿ ಈ ಹಬ್ಬ ಇವರ ಬೇರೆ ಹಬ್ಬಗಳಿಗಿಂತಲೂ ಮಿಗಿಲಾದುದಾಗಿದೆ ಎಂದರೆ ಜುಮುಅ ದಿನ ವಿಶೇಷ ರೀತಿಯ ಏರ್ಪಾಡು ಮಾಡಬೇಕಾಗಿದೆ. ಕೇವಲ ವರ್ಷಕ್ಕೊಮ್ಮೆ ಹಬ್ಬ ಆಚರಿಸುವುದುದಲ್ಲ, ಹೇಳಿದರು. ಈ ಹಬ್ಬಕ್ಕಾಗಿಯೇ ಸೂರತುಲ್ ಜುಮುಅವಿದೆ. ಅದಕ್ಕೆ ಖಸರ್ ನಮಾಝ್ ಇದೆ. ಜುಮುಅ ದಿನದ ಅಸರ್ ವೇಳೆಯೇ ಆದಮ್(ಅ) ಜನ್ಮ ತಾಳಿದರು. ಈ ಹಬ್ಬ ಆ ಮೊದಲ ಮನುಷ್ಯ ಹುಟ್ಟಿದ ಕಾಲಘಟ್ಟವನ್ನು ಸಹ ಸೂಚಿಸುತ್ತದೆ. ಪವಿತ್ರ ಖುರ್‌ಆನ್ ಅದರ ಮೇಲೆಯೇ ಅಂತ್ಯಗೊಂಡಿತು. (ಮಲ್ಫೂಝಾತ್, ಸಂ.-8, ಪುಟ-399, 1984 ಆವೃತ್ತಿ)

ಪವಿತ್ರ ಖುರ್‌ಆನ್ ಹದೀಸಿನ ಮೇಲೆ ಖಾಝೀ ಆಗಿರುತ್ತದೆ ಎಂಬುದರ ಮೇಲೆ ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

ಬಹುತೇಕ ಮುಸ್ಲಿಮರು ಮಾಡುವ ಇನ್ನೊಂದು ತಪ್ಪು ಏನೆಂದರೆ ಅವರು ಹದೀಸಿಗೆ ಪವಿತ್ರ ಖುರ್‌ಆನ್ ಮೇಲೆ ಆದ್ಯತೆ ನೀಡುತ್ತಾರೆ. ಇದು ತಪ್ಪು ಕೆಲಸವಾಗಿದೆ. ಪವಿತ್ರ ಖುರ್‌ಆನ್ ದೃಢಪಡಿಸಲಾದ ಸ್ಥಾನವನ್ನು ಹೊಂದಿದೆ. ಆದರೆ ಹದೀಸಿನ ಸ್ಥಾನ ಸಂಶಯಕರವಾಗಿದೆ. ಹದೀಸು ಖಾಝೀ (ನ್ಯಾಯಧೀಶ) ಅಲ್ಲ. ಆದರೆ ಪವಿತ್ರ ಖುರ್‌ಆನ್ ಹದೀಸಿನ ಮೇಲೆ ಖಾಝೀ (ನ್ಯಾಯಧೀಶ) ಆಗಿದೆ ತೀರ್ಪು ನೀಡುವ ಕೆಲಸ ಪವಿತ್ರ ಖುರ್‌ಆನ್‌ಗೆ ಇದೆ. ಹದೀಸು ಪವಿತ್ರ ಖುರ್‌ಆನ್‌ನ ವ್ಯಾಖ್ಯಾನ ರೂಪದಲ್ಲಿದೆ. ಪವಿತ್ರ ಖುರ್‌ಆನ್‌ಗೆ ವಿರುದ್ಧವಾಗಿಲ್ಲದ ಹದೀಸುಗಳನ್ನು ನಂಬುವುದು ಅವಶ್ಯಕವಾಗಿದೆ. ಪವಿತ್ರ ಖುರ್‌ಆನ್‌ನಲ್ಲಿ ಅವತೀರ್ಣವಾದ ಆಜ್ಞೆಗಳನ್ನು ಹಝ್ರತ್ ಮುಹಮ್ಮದ್(ಸ) ರವರು ಕೃತ್ಯ ರೂಪದಲ್ಲಿ ಮಾಡಿ ತೋರಿಸಿದರು. ಅವರು ಆಜ್ಞೆಗಳನ್ನು ಪಾಲಿಸುವ ವಿಧಾನವನ್ನು ತೋರಿಸಿಕೊಟ್ಟರು. ಈ ವಿಧಾನ ನಮಗೆ ತೋರಿಸಿಕೊಡದಿರುತ್ತಿದ್ದರೆ ಇಸ್ಲಾಂ ಏನೆಂದು ನಮಗೆ ತಿಳಿಯುತ್ತಿರಲಿಲ್ಲ. ಆದರೆ ಮೂಲ ಪ್ರಮಾಣ ಪವಿತ್ರ ಖುರ್‌ಆನ್ ಆಗಿದೆ. ಕೆಲವು ಅಹ್ಲೆ ಕಶಫ್ (ದಿವ್ಯದರ್ಶನಗಳಿಸುವವರು) ಹಝ್ರತ್ ಮುಹಮ್ಮದ್(ಸ) ಅವರಿಂದ ನೇರವಾಗಿ ಎಂತಹ ಹದೀಸುಗಳನ್ನು ಆಲಿಸಿದರೆಂದರೆ ಆ ಹದೀಸುಗಳು ಅನ್ಯರಿಗೆ ತಿಳಿದಿರಲಿಲ್ಲ. ಅಥವಾ ಈಗ ನಮಗೆ ದೊರಕಿರುವ ಹದೀಸುಗಳು ಆ ಕಶಫ್‌ಗಳ ಮೂಲಕ ದೃಢೀಕರಿಸಲ್ಪಟ್ಟವು." (ಮಲ್ಫೂಝಾತ್ ಸಂ. 8, ಪುಟ-363-364, 1984 ಆವೃತಿ)

ಹಝ್ರತ್ ಮಸೀಹ್ ಮೌಊದ್(ಅ) ಅವರು ತಮ್ಮ ಬಗ್ಗೆ ಹೀಗೆ ಹೇಳಿದ್ದಾರೆ. ಕೆಲವು ಹದೀಸುಗಳನ್ನು ನಾನು ನೇರವಾಗಿ ಹಝ್ರತ್ ಮುಹಮ್ಮದ್(ಸ) ಅವರಿಂದ ಆಲಿಸಿರುವೆನು. (ಸೀರತುಲ್ ಮಹದಿ, ಸಂಪುಟ-1, ಭಾಗ-3, ಪುಟ-550, ವರದಿ ಸಂಖ್ಯೆ-572)

ಪವಿತ್ರ ಖುರ್‌ಆನ್‌ನ ವಾಗ್‌ವೈಖರಿ ಬಗ್ಗೆ ಹಝುರತ್ ಮಸೀಹ್ ಮೌಊದ್ (ಅ) ಹೇಳುತ್ತಾರೆ.

"ಪವಿತ್ರ ಖುರ್‌ಆನ್‌ನ ವಚನಗಳಲ್ಲಿ ಎಷ್ಟು ವಾಗ್‌ವೈಖರಿ ಮತ್ತು ಔಚಿತ್ಯತೆ, ಮೃದುತ್ವ ಮತ್ತು ಸೂಕ್ಷ್ಮತೆ ಇದೆ ಮತ್ತು ಎಷ್ಟು ವೈಭವಶಾಲಿ ಆಗಿದೆ ಎಂದರೆ ಇಸ್ಲಾಮಿನ ವಿರೋಧಿಯೂ ವಿಮರ್ಶಕನೂ ಆಗಿರುವ ಒಬ್ಬ ವ್ಯಕ್ತಿ ಅರಬಿ ಭಾಷೆಯಲ್ಲೂ ಸಾಹಿತ್ಯದಲ್ಲೂ ನೈಪುಣ್ಯತೆ ಗಳಿಸಿದವನಾಗಿದ್ದರೆ ಅಂತಹ ವ್ಯಕ್ತಿಗೆ ಒಬ್ಬ ದೊರೆ ಹೀಗೆ ಆಜ್ಞೆ ನೀಡುವುದಾದರೆ: ನೀನು ಇಪ್ಪತ್ತು ವರ್ಷಗಳಷ್ಟು ಕಾಲಾವಧಿಯಲ್ಲಿ ಪವಿತ್ರ ಖುರ್‌ಆನ್‌ನ ವಚನಗಳಿಗೆ ಸಮಾನವಾದ ವಿಷಯಗಳಿಗೆ ಸಂಬಂಧಿಸಿದ ನಾಲ್ಕೈದು ಗೆರೆಗಳಷ್ಟು ಬರೆದು ತೋರಿಸದಿದ್ದರೆ ನಿನಗೆ ಮರಣದಂಡನೆ ನೀಡಲಾಗುವುದು ಎಂದು ಹೇಳಿದರೂ ಆ ರೀತಿ ಆಜ್ಞಾಪಿಸಲ್ಪಟ್ಟ ವ್ಯಕ್ತಿಗೆ ಹಾಗೆ ಮಾಡಲು ಸಾಧ್ಯವಾಗಲಾರದು. ಲೋಕದಲ್ಲಿರುವ ನೂರಾರು ಸಾಹಿತಿಗಳು ಅವನಿಗೆ ಸಹಾಯ ಮಾಡವವರಾದರೂ ಅವನಿಗೆ ಹಾಗೆ ಮಾಡಲು ಸಾಧ್ಯವಾಗಲಾರದು. ಪವಿತ್ರ ಖುರ್‌ಆನ್‌ನ ವೈಶಿಷ್ಟ್ಯತೆ ಮತ್ತು ವಾಗ್‌ವೈಖರಿ ಆ ರೀತಿ ಇದೆ. (ಬರಾಹೀನ್ ಅಹ್ಮದಿಯಾ, ರೂಹಾನಿ ಖಝಾಈನ್, ಸಂಪುಟ-1, ಪುಟ-286-287)

ಹಝ್ರತ್ ಮಸೀಹ್ ಮೌಊದ್ (ಅ) ಹೇಳಿದರು. ಇದು ಊಹಾಪೋಹದ ಕಾಲ್ಪನಿಕ ಮಾತಲ್ಲ. ಪವಿತ್ರ ಖುರ್‌ಆನ್

ಅವತೀರ್ಣಗೊಂಡ ಕಾಲದ ಮೊದಲಗೊಂಡು ಈ ಪಂಥಾಹ್ವಾನ ನೀಡಲಾಗಿದೆ. ವಾಗ್ವೈಖರಿಗಳಿಗೆ ಸಂಬಂಧಿಸಿದ ಪವಿತ್ರ ಖುರ್‌ಆನ್ ಎದುರಿಗೆ ಬರುವುದು ಅಸಾಧ್ಯವಾಗಿದೆ. ಉದಾಹರಣೆಗೆ ಸೂರತುಲ್ ಫಾತಿಹದ ಪ್ರಸಕ್ತ ವಿಧಾನವನ್ನು ಬಿಟ್ಟು ಬೇರೊಂದು ವಿಧಾನ ಬಳಸಿ ನೋಡಿದರೆ ಆ ಉನ್ನತ ಉದ್ದೇಶ ಲಕ್ಷ್ಯಗಳು, ಈ ವಿಧನದಲ್ಲಿದ್ದಂತೆ ಸಾಧಿಸುವುದು ಅಸಾಧ್ಯ. ಅದೇ ರೀತಿ ನೀವು ಯಾವುದೇ ಸೂರಃ ತೆಗೆದುಕೊಳ್ಳಿ, ಬೇಕಾದರೆ **ಖುಲ್ ಹುವಲ್ಲಾಹು ಅಹದ್** (ಇಖ್ಲಾಸ್–2) ಅದರಲ್ಲಿ ಏಕದೇವ ವಿಶ್ವಾಸದ ಎಲ್ಲಾ ಹಂತಗಳನ್ನು ವಿವರಿಸಲಾಗಿದೆ. ಮತ್ತು ಪ್ರತಿಯೊಂದು ರೀತಿಯ ಶಿರ್ಕ್ (ಬಹುದೇವಾರಾಧನೆಯ ವಿಶ್ವಾಸ) ಖಂಡಿಸಲಾಗಿದೆ. ಇದು ಪವಿತ್ರ ಖುರ್‌ಆನ್‌ಗೆ ದೊರೆತ ವೈಶಿಷ್ಠತೆ ಮಾತ್ರವಾಗಿದೆ. ನನಗೆ ಆಶ್ಚರ್ಯವಾಗುತ್ತದೆ. ಕೆಲ ಮೂರ್ಖರು. "ಮುಖಾಮಾತೆ ಹರೀರಿ" ಅಥವಾ "ಸಬ್‌ಅ ಮುಅಲ್ಲಖ" ಈ ಎರಡು ಪುಸ್ತಕಗಳಿವೆ. ಅದನ್ನು ಅದ್ವಿತೀಯ ಹಾಗೂ ಶ್ರೇಷ್ಠವಾದವುಗಳು ಎನ್ನುತ್ತಾರೆ. ಈ ಪೈಕಿ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹೀಗೆ ಅವರು ಪವಿತ್ರ ಖುರ್‌ಆನ್ ವೈಶಿಷ್ಟ್ಯದ ಮೇಲೆ ಆಕ್ರಮಣ ಮಾಡಬಯಸುತ್ತಾರೆ. ಅವರು ಇಷ್ಟು ಸಹ ಅರಿಯುವುದಿಲ್ಲ. ಸ್ವತಃ ಅದರ ಲೇಖಕರೇ ಅದನ್ನು ಅದ್ವಿತೀಯ ಎಂದು ಸಾರುವುದಿಲ್ಲ. ಎರಡನೆಯದಾಗಿ ಸ್ವತಃ ಹರೀರಿಯ ಲೇಖಕರೇ ಪವಿತ್ರ ಖುರ್‌ಆನ್‌ನ ವಾಗ್ವೈಖರಿಯನ್ನು ನಂಬುವವರಾಗಿದ್ದರು. ಅದಲ್ಲದೇ ಆಕ್ಷೇಪ ಮಾಡುವವರು ಸತ್ಯಸಾಕ್ಷ್ಯಗಳನ್ನು ಲೆಕ್ಕಿಸುವುದಿಲ್ಲ, ಬದಲು ಅದನ್ನು ಬಿಟ್ಟು ಕೇವಲ ಪದಗಳ ಕಡೆಗೆ ವಾಲುತ್ತಾರೆ. ಮೇಲೆ ಹೇಳಿದ ಪುಸ್ತಕಗಳು ಸತ್ಯ ಹಾಗೂ ವಾಕ್ಚಾತುರ್ಯದಿಂದ ವಂಚಿತವಾಗಿವೆ. ವೈಶಿಷ್ಟ್ಯತೆಯ ಗುಣವೆಂದರೆ ಎಲ್ಲ ರೀತಿಯ ವಿವರಗಳನ್ನು ಒಳಗೊಂಡಿರಬೇಕು. ವಾಕ್‌ವೈಖರಿ ಮತ್ತು ವಾಕ್ಚಾತುರ್ಯ ಕೈಬಿಡಬಾರದು. ಸತ್ಯ ಸಾಕ್ಷ್ಯಗಳನ್ನು ಬಿಟ್ಟುಕೊಡಬಾರದು. ಈ ಪವಾಡ ಕೇವಲ ಪವಿತ್ರ ಖುರ್‌ಆನ್‌ಗೆ ಮಾತ್ರ ಇದೆ. ಅದರಲ್ಲಿ ವಾಗ್ವೈಖರಿ ಮತ್ತು ವಾಕ್ಚಾತುರ್ಯವೂ ಇದೆ, ಸತ್ಯವೂ ಇದೆ, ಜ್ಞಾನವೂ ಇದೆ, ಅದು ಸೂರ್ಯನಷ್ಟು ಪ್ರಕಾಶಮಯ ಹಾಗೂ ಎಲ್ಲ ಹಂತಗಳಲ್ಲೂ ತನ್ನೊಳಗೆ ಪವಾಡಗಳ ಶಕ್ತಿ ಹೊಂದಿರುತ್ತದೆ." (ಮಲ್ಫೂಝಾತ್, ಸಂಪುಟ–1, ಪುಟ 84–85, ಸಂಚಿಕೆ 1984)

ಹಝ್ರತ್ ಮಸೀಹ್ ಮೌಊದ್ (ಅ) ಹೇಳುತ್ತಾರೆ. ಪವಿತ್ರ ಖುರ್‌ಆನ್ ವಾಗ್ವೈಖರಿಗೆ ಸಂಬಂಧಿಸಿದ ಒಂದು ಸಂದರ್ಭದಲ್ಲಿ ಪಾದರಿ ಫಂಡರ್ ಹರೀರಿ ಮತ್ತು ಅಬ್ದುಲ್ ಫಝುಲ್ ಮತ್ತು ಕೆಲ ಇಂಗ್ಲೀಷ್ ಗ್ರಂಥಗಳನ್ನು ಪ್ರಸ್ತುತಪಡಿಸಿದರು. ಬಹಳ ಮುಂಚೆಯ ವಿಷಯವಾಗಿದೆ. ನಾವು ಆ ಸಮಯದಲ್ಲೂ ಯೋಚಿಸಿದೆವು. ಇವನು ಸುಳ್ಳು ಹೇಳುತ್ತಿದ್ದಾನೆ ಎಂದು. ಏಕೆಂದರೆ ಮೊದಲಗಿ ಆ ಲೇಖಕರೇ ಎಂದೂ ಈ ದಾವೆಯನ್ನು ಸಾರಲಿಲ್ಲ. ಅವರ ಗ್ರಂಥಗಳು ಅದ್ವಿತೀಯವಾಗಿದೆ ಎಂದು. ಬದಲು ಅವರು ತನ್ನ ದುರ್ಬಲತೆಯನ್ನು ಸದಾ ಹೇಳಿಕೊಂಡು ಬಂದಿದ್ದರು. ಮತ್ತು ಪವಿತ್ರ ಖುರ್‌ಆನ್‌ನ ಪ್ರಶಂಸಕರಾಗಿದ್ದರು. ಎರಡನೆಯದಾಗಿ ಅವರುಗಳ ಪುಸ್ತಕಗಳಲ್ಲಿ ಅರ್ಥಸಹಿತ ಪದಗಳು ನಡೆಯುತ್ತವೆ ಕೇವಲ ಪದಗಳ ಜೋಡನೆ ಇರುತ್ತವೆ, ಪ್ರಾಸಕ್ಕೋಸ್ಕರ ಒಂದು ಪದದ ಜೊತೆಗೆ ಇನ್ನೊಂದು ಪದವನ್ನು ಹುಡುಕಿ ಹಾಕುತ್ತಾರೆಯೇ ಹೊರತು ವಾಕ್ಚಾತುರ್ಯ ಇರುವುದಿಲ್ಲ. ಪವಿತ್ರ ಖುರ್‌ಆನ್ ವಿಧಿಬದ್ಧವಾದ ಸತ್ಯ ಮತ್ತು ವಾಗ್ವೈಖರಿಯಿಂದ ಕೂಡಿದೆ. ಸತ್ಯವೂ ಇದೆ, ಜ್ಞಾನವು ಇದೆ, ಕೇವಲ ಪದಗಳ ಜೋಡನೆ ಇಲ್ಲ. ಪದಗಳನ್ನು ಅಲಂಕರಿಸಲಾಗಿಲ್ಲ. ಅವರು ಹೇಳಿದರು: ವಾಸ್ತವವಾಗಿ ಸತ್ಯ ಮತ್ತು ಜ್ಞಾನದ ಜೊತೆಯಲ್ಲಿ ಪ್ರಾಸವು ಕೂಡುವುದು ಅಲ್ಲಾಹನ ಸಹಾಯದಿಂದ ಸಾಧ್ಯವಾಗುತ್ತದೆ. ಇದು ಮೂಲ ಸಿದ್ದಾಂತವಾಗಿದೆ. ಇಲ್ಲದಿದ್ದರೆ ಮನುಷ್ಯರ ಕೃತಿಗಳು ಹರೀರಿ ಮುಂತಾದವು ತರವೇ ಇರುವುದು." (ಮಲ್ಫೂಝೂತ್, ಸಂಪುಟ–2, ಪುಟ–205, ಸಂಚಿಕೆ 1984)

ಮತ್ತೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸಭೆಯಲ್ಲಿ ನುಡಿಯುತ್ತಾರೆ: ಇಜಾಝುಲ್ ಮಸೀಹ್ ವ್ಯಾಖ್ಯಾನದ ಕುರಿತು ಯಾವ ವಿವರಗಳಿದ್ದವು. ಆ ಪೈಕಿ ಯಾವ ವಿರೋಧಿಗಳನ್ನಾಗಲೀ ಅಲ್ಲಾಹನು ಅದನ್ನು ಎದುರಿಸುವ ಶಕ್ತಿ ನೀಡಲಿಲ್ಲ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಪವಿತ್ರ ಖುರ್‌ಆನ್ ಒಂದು ಪವಾಡವಾಗಿದೆ ಎಂಬ ಕುರಿತು ಎರಡು ಮತಗಳಿವೆ. ಒಂದು ಅಲ್ಲಾಹನು ವಿರೋಧಿಗಳಿಗೆ ಪರಾಜಯಗೊಳಿಸಿದನು ಎಂದರೆ ಆ ಜನರಿಗೆ ಆ ಸಮಯ ಎದುರಿಸುವ ಭಾಗ್ಯ ನೀಡಲಿಲ್ಲ. ಎರಡನೆಯದಾಗಿ ಯಾವುದು ಸರಿ ಮತ್ತು ಸತ್ಯಧರ್ಮವಾಗಿದೆ, ನಮ್ಮ ಧರ್ಮವು ಅದೇ ಆಗಿದೆ. ಅದೇನೆಂದರೆ ವಿರೋಧಿಗಳು ಎದುರಿಸಲು ಅಶಕ್ತರಾಗಿದ್ದರು. ವಾಸ್ತವವಾಗಿ ಅವರ ಜ್ಞಾನ ಬುದ್ಧಿ ಕಸಿದುಕೊಳ್ಳಲಾಗಿತ್ತು. ಪವಿತ್ರ ಖುರ್‌ಆನ್‌ನ ಪವಾಡ ನಮ್ಮ ಖುರ್‌ಆನ್ ವ್ಯಾಖ್ಯಾನದಿಂದ ಸರಿಯಾಗಿ ತಿಳಿದುಕೊಳ್ಳಬಹುದಾಗಿದೆ. ಸಾವಿರಾರು ಮತಪಂಡಿತರು ಇದ್ದಾರೆ. ಅವರಿಗೆ ಪ್ರೇರಣೆ ನೀಡುವಂತಹ ಜಾಹೀರಾತು ಸಹ ಬರೆಯಲಾಗಿದೆ. ಆದರೆ ಅದನ್ನು ಬಯಸುವವರು ಯಾರೂ ಮುಂದಾಗಲಿಲ್ಲ." (ಮಲ್ಫೂಝಾತ್, ಸಂಪುಟ–2, ಪುಟ–217–218, 1984)

ಅಂದಹಾಗೆ ಅವರ(ಅ) ಗ್ರಂಥಗಳನ್ನು ನಮಗೆ ಪವಿತ್ರ ಖುರ್‌ಆನ್ ಗ್ರಹಿಸುವ ದೃಷ್ಟಿಯಿಂದ ಓದಬೇಕಾಗಿದೆ. ಇನ್ನೊಂದು ಸಂದರ್ಭದಲ್ಲಿ ಅವರು (ಅ) ಹೇಳುತ್ತಾರೆ. ಅಲ್ಲಾಹನು ಪವಿತ್ರ ಖುರ್‌ಆನ್ನನ್ನು ಎಂತಹ ಶ್ರೇಷ್ಠತೆ ನೀಡಿದರೆಂದರೆ ಅದು ಉನ್ನತ ದರ್ಜೆಯ ನೈತಿಕ ಶಿಕ್ಷಣ ಮತ್ತು ಸಂಸ್ಕೃತಿ ಹಾಗೂ ವಾಗ್ವೈಖರಿಯದ್ದಾಗಿದೆ. ಅದನ್ನು ಯಾವ ಮನುಷ್ಯನು ಎದುರಿಸಲು ಸಾಧ್ಯವಿಲ್ಲ. ಅಂತಹುದೇ ಪವಾಡ ಅಪ್ರತ್ಯಕ್ಷ ವಾರ್ತೆಗಳು ಮತ್ತು ಭವಿಷ್ಯವಾಣಿಗಳಾಗಿವೆ. ಈ ಕಾಲದ ಯಾವ ಧಾರ್ಮಿಕ ನೇತಾರ ಅಥವಾ ಅನುಯಾಯಿಗೆ ಭವಿಷ್ಯವಾಣಿಗಳನ್ನು ಪ್ರಕಟಿಸಬಲ್ಲ ಮತ್ತು ಪವಾಡಗಳನ್ನು ತೋರಿಸಬಲ್ಲೆ ಎಂದು ವಾದಿಸಲು ಸಾಧ್ಯವಿಲ್ಲ. ಹೀಗೆ ಅಲ್ಲಾಹನು ನಮ್ಮ ದೃಷ್ಟಾಂತಗಳಿಗೆ ಒಂದು ಅಸಾಧಾರಣ ಸ್ಪಷ್ಟತೆ ಒದಗಿಸಿದ್ದಾನೆ. ಏಕೆಂದರೆ ಯಾವ ವ್ಯಕ್ತಿಗೂ ವಾದಿಸಲು ಯಾವುದೇ ನೆಪ ದೊರಕದಂತಾಗಬೇಕು ಹೀಗೆ ಅಲ್ಲಾಹನು ತನ್ನ ಸ್ಪಷ್ಟವಾದ ದೃಷ್ಟಾಂತಗಳನ್ನು ತೋರಿಸಿದ್ದಾನೆ. ಅದರಲ್ಲಿ ಯಾವ ಅನುಮಾನ ಸಂಶಯವೂ ಇಲ್ಲ. (ಮಲ್ಫೂಝಾತ್, ಸಂಪೂಟ–10, ಪುಟ–172, ಸಂಚಿಕೆ 1984)

ಮತ್ತು ಪವಿತ್ರ ಖುರ್‌ಆನ್‌ನ ವಾಗ್ವೈಖರಿಗೆ ಸಂಬಂಧಿಸಿ ಹೇಳಿದರು. ಜನರ ವಾಕ್ಚಾತುರ್ಯ ಮತ್ತು ವಾಗ್ವೈಖರಿ ಅದರ ಪ್ರಾಸಕ್ಕಷ್ಟೇ ಸೀಮಿತವಾಗಿರುತ್ತದೆಯೇ ಹೊರತು ಬೇರೆ ಏನೂ ಅಲ್ಲ. ಉದಾಹರಣೆಗೆ ಒಬ್ಬ ಅರಬನು ಬರೆದಂತೆ. **ಸಾಫರ್‌ತು ಇಲಾ ರೂಮಿನ್ ವ ಅನಾ ಅಲಾ ಜಮಲಿನ್ ಮಾಲೂಮಿನ್**, ನಾನು ರೋಮ್‌ನ ಕಡೆಗೆ ಹೊರಟಿದ್ದೆ. ನಾನು ಎಂತಹ ಒಂಟೆಯ ಮೇಲೆ ಸವಾರನಾಗಿದ್ದೆ ಎಂದರೆ ಅದರ ಮೂತ್ರ ತಡೆಯಲ್ಪಟ್ಟಿತ್ತು. ಈ ಪದಗಳು ಕೇವಲ ಪ್ರಾಸಬದ್ಧತೆಕೋಸ್ಕರ ಉಪಯೋಗಿಸಲಾಗಿದೆ. ಪವಿತ್ರ ಖುರ್‌ಆನ್‌ನ ಶ್ರೇಷ್ಠತೆಯೇನೆಂದರೆ ಅದರಲ್ಲಿ ಎಲ್ಲಾ ಪದಗಳು ಒಂದು ಮುತ್ತಿನ ರೀತಿಯಲ್ಲಿ ಪೋಣಿಸಲಾಗಿದೆ, ಅದು ಸೂಕ್ತ ಸ್ಥಳಗಳಲ್ಲಿ ಬಳಸಲಾಗಿದೆ, ಯಾರಿಗೂ ಅದರ ಒಂದಕ್ಷರವನ್ನು ಸಹ ಒಂದು ಜಾಗದಿಂದ ಇನ್ನೊಂದು ಜಾಗಕ್ಕೆ ಸ್ಥಳಾಂತರಿಸುವಂತಿಲ್ಲ. ಅದಾಗ್ಯೂ ಪ್ರಾಸಬದ್ಧತೆ ಮತ್ತು ವಾಕ್ಚಾತುರ್ಯಕ್ಕೆ ಬೇಕಾದ ಎಲ್ಲಾ ಗುಣಗಳು ಅದರಲ್ಲಿದೆ. (ಮಲ್ಫೂಝಾತ್, ಸಂಪುಟ–10, ಪುಟ–172–173, 1984 ಆವೃತಿ)

ಪವಿತ್ ಖುರ್‌ಆನ್‌ನ ವಾಗ್ವೈಖರಿಗೆ ಸಂಬಂಧಿಸಿ ವಿವರಣೆ ನೀಡುತ್ತಾ ಒಂದು ಸಭೆಯಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು. "ಇಲ್ಲ ಈಗ ಪ್ರಕಟವಾಗುತ್ತಿರುವ ದೃಷ್ಠಾಂತಗಳು ವಾಸ್ತವದಲ್ಲಿ ಹಝ್ರತ್ ಮಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿವ ಸಲ್ಲಮರ ಅಸಾಧಾರಣ ಪವಾಡಗಳಾಗಿವೆ. ಈ ಭವಿಷ್ಯವಾಣಿಗಳು ಪವಿತ್ರ ಖುರ್‌ಆನ್‌ನ ಭವಿಷ್ಯವಾಣಿಗಳೇ ಆಗಿವೆ. ಏಕೆಂದರೆ ಅವು ಹಝ್ರತ್ ಮುಹಮ್ಮದ್(ಸ) ರವರನ್ನು ಅನುಸರಣೆ ಮಾಡಿರುವುದರಿಂದ ಮತ್ತು ಪವಿತ್ರ ಖುರ್‌ಆನ್‌ನ ಉಪದೇಶಗಳ ಫಲಗಾಗಿವೆ. ಈಗ ಯಾವುದೇ ಧರ್ಮದ ಧಾರ್ಮಿಕ ನೇತಾರ ಅಥವಾ ಅನುಯಾಯಿಗೆ ಭವಿಷ್ಯವಾಣಿಗಳನ್ನು ಪ್ರಕಟಿಸಬಲ್ಲ ಮತ್ತು ಪವಾಡಗಳನ್ನು ತೋರಿಸಬಲ್ಲೆ ಎಂದು ವಾದಿಸಲು ಸಾಧ್ಯವಿಲ್ಲ. ಅವರಿಂದ ಅಸಾಧಾರಣ ದೃಷ್ಟಾಂತಗಳು ಪ್ರಕಟವಾಗಲಾರವು. ಆದುದರಿಂದ ಪವಿತ್ರ ಖುರ್‌ಆನ್‌ನ ಪವಾಡ ಇತರ ಎಲ್ಲಾ ಧಾರ್ಮಿಕ ಗ್ರಂಥಗಳ ಪವಾಡಗಳಿಗಿಂತ ಮಿಗಿಲಾಗಿದೆ. ಅವರ (ಅ) ತನ್ನ ಪವಾಡಗಳು ಏನಿವೆ. ಅವು ಸಹ ಪವಿತ್ರ ಖುರ್‌ಆನ್‌ನ ಫಲವೇ ಆಗಿದೆ. ಹಝುರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಅನುಯಾಯಿಯಾದ ಕಾರಣವೇ ಆಗಿದೆ.

ಮತ್ತೆ ಅವರು(ಅ) ಹೇಳಿದರು. ಮತ್ತೊಂದು ರೀತಿಯಲ್ಲಿ ವಾಕ್ಚಾತುರ್ಯ ಹಾಗೂ ವಾಗ್ವೈಖರಿ ಎಂತಹ ಉನ್ನತ ಮಟ್ಟದ್ದಾಗಿದೆ ಎಂದರೆ ಅದು ನ್ಯಾಯಬಯಸುವ ಶತ್ರುಗಳಿಗೆ ಸಹ ಒಪ್ಪಿತವಾಗಿವೆ. ಪವಿತ್ರ ಖುರ್‌ಆನ್ **ಫಾತು ಬಿಮಾರತಿನ್ ಮಿನ್ ಮಿಸಲಿಹಿ** (ಅಲ್ ಬಖರ–24) ಅಂದರೆ ಅದರಂತೆ ಒಂದು ಸೂರಃ ತನ್ನಿರಿ ಎಂಬ ವಾದ ಮಂಡಿಸಿತು. ಆದರೆ ಇದುವರೆಗೂ ಅದರ ಉದಾಹರಣೆ ತರಲು ಯಾರಿಂದಲೂ ಸಾಧ್ಯವಾಗಲಿಲ್ಲ." ಈ ವಾದ ಪವಿತ್ರ ಖುರ್‌ಆನ್‌ನದ್ದಾಗಿದೆ. ದೊಡ್ಡ ದೊಡ್ಡ ಅರಬಿ ಸಾಹಿತಿಗಳು, ಅವರುಗಳ ದೊಡ್ಡ ದೊಡ್ಡ ಸಭೆಗಳನ್ನು ಆಯೋಜಿಸುತ್ತಿದ್ದರು, ಅವರು ಸಹ ಇದನ್ನು ಎದುರಿಸಲು ವಿಫಲರಾದರು. ಪವಿತ್ರ ಖುರ್‌ಆನ್‌ನ ವಾಕ್ಚಾತುರ್ಯ ಅದರಲ್ಲಿ ಕೇವಲ ಪದಜೋಡನೆ ಎಂತಿರುವುದಿಲ್ಲ. ಬದಲು ಉನ್ನತ ದರ್ಜೆಯ ಪದಗಳು ಆಶ್ಚರ್ಯ ಜನಕ ರೀತಿಯಲ್ಲಿ ಜೋಡಿಸಲ್ಪಟ್ಟಿವೆ. ಅದೇ ರೀತಿ ಅವು ಸತ್ಯ ಸಾಕ್ಷ್ಯಗಳನ್ನು ಹೊಂದಿವೆ. ಆದುದರಿಂದ ಇಂತಹ ಸಾಕ್ಷ್ಯಾಧಾರಗಳನ್ನು ವಿವರಿಸಲು

ಅಥವಾ ವಾಕ್ಚಾತುರ್ಯ ತೋರಿಸಲು ಇದು ಯಾವ ಮನುಷ್ಯನ ಕಾರ್ಯವಲ್ಲ.

ಅವರು ಹೇಳಿದರು. ಅಲ್ಲಾಹನು ಒಂದೆಡೆ ಹೇಳಿದನು. **ಯತ್‌ಲು ಸುಹುಫನ್ ಮುತಹರತನ್, ಫೀಹಾ ಕುತುಬನ್ ಖಯ್ಯಿಮ:** (ಅಲ್ ಬಯ್ಯನ: 3–4) ಎಂದರೆ ಅದರಲ್ಲಿ ಶಾಶ್ವತವಾದ ಆಜ್ಞೆಗಳಿವೆ. ಸಾಹಿತಿಗಳು ಅರಿಯುವವರು ಸಾಹಿತ್ಯದಲ್ಲಿ ಪರಿಶುದ್ದ ಶಿಕ್ಷಣ ಮತ್ತು ಉನ್ನತ ಚಾರಿತ್ರ್ಯ ವ್ಯಕ್ತಪಡಿಸುವುದು ಕಠಿಣ ಕೆಲಸವಾಗಿದೆ. ಅಂತಹುದರಲ್ಲಿ ಇಂತಹ ಪ್ರಭಾವಿತ ಮತ್ತು ತನ್ನೆಡೆ ಸೆಳೆಯುವ ಶಿಕ್ಷಣ ಹೊಂದಿದೆ ಎಂದರೆ ಎಲ್ಲಾ ಕೆಡುಕು ಗುಣಗಳನ್ನು ರದ್ದುಪಡಿಸಿ ಅದರ ಜಾಗದಲ್ಲಿ ಒಳ್ಳೆಯ ಗುಣಗಳನ್ನು ಪಡೆಯುವ ಶಕ್ತಿ ನೀಡುತ್ತಿದೆ. ಅರಬರು ಯಾವ ಸ್ಥಿತಿಯಲ್ಲಿದ್ದರು, ಅದು ಯಾರಿಂದಲೂ ಗೌಪ್ಯವೇನಿಲ್ಲ. ಅವರಲ್ಲಿ ಎಲ್ಲಾ ರೀತಿಯ ಕೆಟ್ಟ ಗುಣಗಳು ಒಟ್ಟಾಗಿದ್ದವು. ಮತ್ತು ವರ್ಷಾನುಗಟ್ಟಲೆಯಿಂದ ಅವರ ಸ್ಥಿತಿ ಹದಗೆಟ್ಟಿತ್ತು. ಆದರೆ ಎಷ್ಟರಪಟ್ಟಿಗೆ ಪೈಗಂಗರ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರು ತನ್ನ ಅನುಗ್ರಹಿತ ಶಕ್ತಿಯಿಂದ 23 ವರ್ಷಗಳ ಒಳಗೆ ಅವರ ದಿಶೆ ದಿಶಾ ಪಲ್ಲಟವಾದವು. ಇದು ಆ ಶಿಕ್ಷಣದ ಪರಿಣಾಮವೇ ಆಗಿತ್ತು.  ಹೇಳಿದರು. ಪವಿತ್ರ ಖುರ್‌ಆನ್‌ನ ಒಂದು ಅತ್ಯಂತ ಚಿಕ್ಕ ಅಧ್ಯಾಯವನ್ನು ನೋಡುವುದಾದರೂ ಅದು ಉನ್ನತ ಮಟ್ಟದ ವಾಗ್ವೈಖರಿ ಭರಿತವಾಗುವುದು ಮಾತ್ರವಲ್ಲ, ಉಪದೇಶಗಳ ವೈಶಿಷ್ಟತೆ ಸಹ ಅದರಲ್ಲಿ ಕಾಣಬಹುದಾಗಿದೆ. ಉದಾಹರಣೆಗೆ ಸೂರತುಲ್ ಇಖ್‌ಲಾಸ್ ನೋಡಿರಿ. ಅದರಲ್ಲಿ ಏಕದೇವ ವಿಶ್ವಾಸದ ಎಲ್ಲ ಹಂತಗಳನ್ನು ವಿವರಿಸಲಾಗಿದೆ. ಮತ್ತು ಪ್ರತಿಯೊಂದು ರೀತಿಯ ಶಿರ್ಕ್ (ಬಹುದೇವಾರಾಧನೆಯ ವಿಶ್ವಾಸ) ಖಂಡಿಸಲಾಗಿದೆ. ಇದೇ ರೀತಿ ಸೂರತುಲ್ ಫಾತಿಹ ನೋಡಿರಿ. ಅದೆಷ್ಟು ಅದ್ಬುತಕರವಾಗಿದೆ. ಅದು ಏಳು ವಚನಗಳು ಅಡಕಗೊಂಡ ಚಿಕ್ಕ ಅಧ್ಯಾಯವಾಗಿದೆ. ಆದರೆ ಅದರಲ್ಲಿ ಪವಿತ್ರ ಖುರ್‌ಆನ್‌ನ ವೈಶಿಷ್ಟ್ಯತೆ, ಸಾರಾಂಶ ಮತ್ತು ಸಂಚಿಕೆಯನ್ನು ನೀಡಲಾಗಿದೆ. ಅದರಲ್ಲಿ ಅಲ್ಲಾಹನ ಅಸ್ತಿತ್ವ, ಅವನ ಗುಣವಿಶೇಷತೆಗಳು, ಪ್ರಾರ್ಥನೆಯ ಅವಶ್ಯಕತೆ, ಪ್ರಾರ್ಥನೆ ಅಂಗೀಕರಿಸುವುದಕ್ಕೆ ಅವಶ್ಯಕವಾದ ನಿಬಂಧನೆಗಳು, ಪ್ರಯೋಜನಕರವಾದ ಪ್ರಾರ್ಥನೆ ಮಾಡುವ ವಿಧನ ಹಾಗೂ ಹಾನಿಕರವಾದ ಮಾರ್ಗಗಳಿಂದ ರಕ್ಷಣೆ ಪಡೆಯಲು ಮಾರ್ಗದರ್ಶನ ನೀಡಲಾಗಿದೆ. ನೀವು ಬಹುತೇಕ ಧರ್ಮ ಗ್ರಂಥಗಳನ್ನು ಮತ್ತು ಅವುಗಳ ಅನುಯಾಯಿಗಳನ್ನು ನೋಡಿರಿ. ಅವು ಅನ್ಯಧರ್ಮಗಳ ನ್ಯೂನತೆಗಳನ್ನು ವಿವರಿಸುತ್ತವೆ.  ಅನ್ಯಧರ್ಮಗಳ ಉಪದೇಶಗಳನ್ನು ಟೀಕಿಸುತ್ತವೆ. ಆದರೆ ಆ ರೀತಿ ಟೀಕಿಸುವಾಗ ಅವರೆದುರಿಗೆ ಉತ್ತಮವಾದ ಉಪದೇಶಗಳನ್ನು ಯಾವುದೇ ಧರ್ಮದ ಅನುಯಾಯಿ ಮುಂದೆ ಇರಿಸುವುದಿಲ್ಲ. ಇಂತಿಂತಹ ಕೆಟ್ಟ ವಿಷಯದಿಂದ ರಕ್ಷಣೆ ಪಡೆಯಲು ಈ ಉತ್ತಮ ಉಪದೇಶ ನೀಡುತ್ತೇನೆ ಎಂದು ವಾದಿಸುವುದಿಲ್ಲ. ಪವಿತ್ರ ಖುರ್‌ಆನ್‌ಗೆ ಮಾತ್ರ ಈ ಅಭಿಮಾನರ್ಹ ಸ್ಥಾನವಿದೆ. ಪವಿತ್ರ ಖುರ್‌ಆನ್ ಮಿಥ್ಯ ಧರ್ಮಗಳನ್ನು ಖಂಡಿಸುವಾಗ ಮತ್ತು ಅವುಗಳ ತಪ್ಪು ನಂಬಿಕೆಗಳನ್ನು ಬಹಿರಂಗಪಡಿಸುವಾಗ ಅದಕ್ಕೆ ಬದಲಾಗಿ ವಾಸ್ತವಿಕ ತಪ್ಪು ನಂಬಿಕೆಗಳನ್ನು ಬಹಿರಂಗಪಡಿಸುವಾಗ ಅದಕ್ಕೆ ಬದಲಾಗಿ ವಾಸ್ತವಿಕ ಸತ್ಯ ಉಪದೇಶವನು ನೀಡುತ್ತದೆ."  (ಮಲ್ಫುಝಾತ್, ಸಂಪುಟ–3, ಪುಟ–46–48, 1984)

ಇದು ಎಂತಹ ಸುಂದರ ಶಿಕ್ಷಣವಾಗಿದೆ ಎಂದರೆ ಇಂದಿನ ಹೆಸರಿಗೆ ಮಾತ್ರ ವಿದ್ಯಾವಂತರೆಂದು ಕರೆಯಿಸಿಕೊಳ್ಳುವವರು ಸಹ ರದ್ದುಪಡಿಸಲಾರರು. ಎಷ್ಟೋ ಸಂದರ್ಭಗಳನ್ನು ನಾನು ನೋಡಿದ್ದೇನೆ. ಅನ್ಯ ಜನರ ಮುಂದೆ ಪವಿತ್ರ ಖುರ್‌ಆನ್‌ನ ಶಿಕ್ಷಣದ ಪ್ರಕಾರ ಯಾವುದೆ ಸಮಸ್ಯೆಯ ಪರಿಹಾರವನ್ನು ಹೇಳಿದಾಗ ಅವರು ಇದನ್ನು ಒಪ್ಪಿಕೊಳ್ಳುತ್ತಾರೆ. ಪವಿತ್ರ ಖುರ್‌ಆನ್‌ನ ಗುಣಗಳನ್ನು ವಿವರಿಸುತ್ತಾ ಹಝ್ರತ್ ಮಸೀಹ ಮೌಊದ್ (ಅ) ಹೇಳುತ್ತಾರೆ: ಪವಿತ್ರ ಖುರ್‌ಆನ್ ಒಂದು ಸುಲಭವಾಗಿ ಅರ್ಥ ಮಾಡಿಕೊಳ್ಳುವ ಗ್ರಂಥವಾಗಿದೆ. ಅವರು (ಅ) ಹೇಳುತ್ತಾರೆ: ನಮಗೆ ಪವಿತ್ರ ಖುರ್‌ಆನ್ ಮನವರಿಕೆ ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ.  ಅದು ಬಹಳ ಕಷ್ಟಕರವಾಗುವುದರಿಂದ ಅದರ ಕಡೆಗೆ ಗಮನ ಹರಿಸುವುದು ಅವಶ್ಯಕವಾಗಿಲ್ಲ ಎಂದು ಕೆಲವು ಮೂರ್ಖರು ಹೇಳುತ್ತಾರೆ ಆದರೆ ಅವರು ಹೇಳುವುದು ತಪ್ಪಾಗಿದೆ. ಪವಿತ್ರ ಖುರ್‌ಆನ್ ನಂಬಿಕೆಗಳಿಗೆ ಸಂಬಂಧಿಸಿದ ವಿಷಯಗಳನ್ನು ಎಷ್ಟು ಸ್ಪಷ್ಟವಾಗಿ ವಿವರಿಸಿದೆ ಎಂದರೆ ಅದು ಅಪ್ರತಿಮ ರೀತಿಯಲ್ಲಿದೆ. ಅದು ಈಡುವ ಸಾಕ್ಷ್ಯಾಧಾರಗಳು ಹೃದಯಗಳ ಮೇಲೆ ಪ್ರಭಾವ ಬೀರುತ್ತವೆ. ಪವಿತ್ರ ಖುರ್‌ಆನ್ ಅದರ ಸ್ಪಷ್ಟತೆಯ ಕಾರಣದಿಂದ ಅರಬ್ ದೇಶದ ನಿರಕ್ಷರಿಗಳಾದ ಗ್ರಾಮೀಣ ಜನರಿಗೆ ಅದರ ಉಪದೇಶಗಳು ಮನವರಿಕೆ ಆಯಿತು. ಹೀಗಿರುವಾಗ ಈಗ ಜನರಿಗೆ ಹೇಗೆ ತಾನೇ ಅದನ್ನು ಮನವರಿಕೆ ಮಾಡಿಕೊಳ್ಳಲು ಸಾಧ್ಯವಿಲ್ಲ?  (ಮಲ್ಫುಝಾತ್, ಸಂಪುಟ–9, ಪುಟ–228, 1984)

ಮತ್ತು ಅವರು ಹೇಳಿದರು: ಪವಿತ್ರ ಖುರ್‌ಆನ್ ಬಳಸುವ ತರ್ಕ ಸತ್ಯವೂ, ಮನವರಿಕೆ ಮಾಡಲು ಸುಲಭವೂ ಆಗಿದೆ. ಅಲ್ಲಾಹನು ನಮಗೆ ಒಂದು ನೇರವಾದ ಮಾರ್ಗವನ್ನು ಕಲಿಸಿರುವನು.  ಆದುದರಿಂದ ಜನರು ಪವಿತ್ರ ಖುರ್‌ಆನ್‌ನ್ನು ಶ್ರದ್ದೆವಹಿಸಿ ಓದುವುದು ಅವಶ್ಯಕವಾಗಿದೆ. ಮಾಡಬೇಕೆಂದು ಆಜ್ಞಾಪಿಸುದನ್ನು, ಮಾಡಬಾರದೆಂದು ಆಜ್ಞಾಪಿಸಿದುದನ್ನೂ ಬೇರೆ ಬೇರೆಯಾಗಿ ನೋಡಿ ಅವುಗಳನ್ನು ಪಾಲಿಸಬೇಕು. ಹಾಗೆ ಮಾಡಿದರೆ ಮಾತ್ರ ಅಲ್ಲಾಹನ ಸಂಪ್ರೀತಿ ಗಳಿಸಲು ಸಾಧ್ಯವಾಗುತ್ತದೆ.

"ಉಳಿದ ತರ್ಕಶಾಸ್ತ್ರಿಗಳು ಮತ್ತು ಸೂಫಿಗಳು ರಚಿಸಿದ ಪಾರಿಭಾಷಿಕ ಪದಗಳಿಂದ ಹಾಗೂ ಬರಹಗಳು ಹೆಚ್ಚಿನ ಜನರಿಗೆ ಎಡವಿ ಬೀಳಲು ಕಾರಣವಾಗುತ್ತಿದೆ. ಏಕೆಂದರೆ ಅದರಲ್ಲಿ ಆತಂಕ ಮತ್ತು ಕಠಿಣತೆ ಇವೆ. ಹಾಗಾಗಿ ನಾಮಧಾರಿ ಪಂಡಿತರ ಮತ್ತು ಸೂಫಿಗಳ ಹಿಂದೆ ಹೋಗಬೇಡಿ. ಅವರು ಯಾವ ರೀತಿಯ ಬರಹಗಳನ್ನು ಬರೆದಿದ್ದಾರೆ ಮತ್ತು ಎಂತಹ ಕಠಿಣ ಮಾರ್ಗಗಳ ರೂಪದಲ್ಲಿ ಪವಿತ್ರ ಖುರ್‌ಆನ್‌ನ್ನು ಪ್ರಸ್ತುತಪಡಿಸಿದ್ದಾರೆ ಎಂದರೆ ಅದರಿಂದ ಎಡವಿ ಬೀಳುವ ಸಾಧ್ಯತೆಯಿದೆ. ಮತ್ತು ಮನವರಿಕೆ ಆಗುವಂತಹದ್ದಲ್ಲ. ಅಂದಹಾಗೆ ಇಂದು ಲೋಕವು ನಾಮಧಾರಿ ಮುಲ್ಲಾಗಳಿಂದ ಸಂಕಟ ಎದುರಿಸುತ್ತಿದೆ. ಈ ಪೈಕಿ ಹಝ್ರತ್ ಮಸೀಹ್ ಮೌಊದ್ (ಅ) ಹೇಳಿದರು: "ಒಬ್ಬ ಸಜ್ಜನನು ಒಳ್ಳೆಯದನ್ನೇ ಬಯಸಿ ಬರೆದಿರಬಹುದು, ಅದಾಗ್ಯೂ ಆ ಮಾತು ಸರಿ ಅಲ್ಲ. ಶೇಖ್ ಅಬ್ದುಲ್ ಖಾದರ್ ಬೋರಾಗಿ ಪರಿಪೂರ್ಣರಾಗಿರಲಿಲ್ಲ. ಏಕೆಂದರೆ ಅವರು ಪೂರ್ಣರೂಪದಲ್ಲಿ ಅವತಾರಗೊಂಡಿರಲಿಲ್ಲ. ಕೇವಲ ಆರೋಹಣವಿತ್ತು. ಮೇಲ್ದರ್ಜೆ ಪಡೆಯಬಯಸಿದ್ದರು. ಅಲ್ಲಾಹನ ಕಡೆಯಿಂದ ಅವರ ಮೇಲೆ ದಿವ್ಯವಾಣಿಗಳು ಆಗುತ್ತಿರಲಿಲ್ಲ. ಬದಲು ಅವರು ಪ್ರಾರ್ಥನೆಗಳ ಸ್ವೀಕಾರವಾಗುತ್ತಿದ್ದವು. ಅದೇ ಕಾರಣದಿಂದ ಅವರ ಬಹಳಷ್ಟು ಪವಾಡಗಳು ಬೆಳಕಿಗೆ ಬಂದಿವೆ. ಪೂರ್ಣ ರೀತಿಯಲ್ಲಿ ಅವತರಿಸುತ್ತಿದ್ದರೆ ಯಾವ ಪವಡವು ಆಗುತ್ತಿರಲಿಲ್ಲ. ಈ ಹೇಳಿಕೆ ನೀಡುವವನು ಹೇಳುತ್ತಾನೆ. ಈ ಮಾತಿನಲ್ಲಿ ಖುರ್‌ಆನ್‌ನ ವಿರೋಧಾಭಾಸ ಸ್ಪಷ್ಟವಾಗಿದೆ ಎಂದು ಹೇಳಿದರು. ಇದು ಪವಿತ್ರ ಖುರ್‌ಆನ್ ಮತ್ತು ಹದೀಸ್‌ಗೆ ಸಂಪೂರ್ಣವಾಗಿ ವಿರುದ್ಧವಾದ ಮಾತಾಗಿದೆ. ವಾಸ್ತವವಾಗಿ ಶೀಖ್ ಅಬ್ದುಲ್ ಖಾದಿರ್ ಜೀಲಾನಿ ಅವರು ಸರ್ವಶಕ್ತ ದೇವರ ಪರಿಪೂರ್ಣ ಸೇವಕರಲ್ಲಿ ಒಬ್ಬರು. ಪವಾಡಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ ಈ ಆಕ್ಷೇಪಣೆಯು ಎಲ್ಲಾ ಪ್ರವಾದಿಗಳಿಗೂ ಅನ್ವಯಿಸುತ್ತದೆ. ಕೆಲವರು, ಅವರ ಅನುಯಾಯಿಗಳು ಇದನ್ನು ನೆನಪಿಸಿಕೊಳ್ಳುವ ಮೂಲಕ ಅವರ ಪವಾಡಗಳ ಬಗ್ಗೆ ಉತ್ಪ್ರೇಕ್ಷೆ ಮಾಡಿದ್ದಾರೆ ಮತ್ತು ಅದನ್ನು ಕಡೆಗಣಿಸಿದ್ದಾರೆ. ಈ ವಿಷಯಗಳು ಅವರ ಬಗ್ಗೆ ತಪ್ಪು, ಹೌದು ಪವಾಡಗಳು ಸಂಭವಿಸುತ್ತವೆ. ನಿಸರ್ಗದ ನಿಯಮ ಮತ್ತು ಷರಿಯತ್‌ನ ಅಡಿಯಲ್ಲಿ ಸಾಧ್ಯವಾಗುವ ಪವಾಡಗಳು ಸಂಭವಿಸುತ್ತವೆ. ಅವು ಪ್ರವಾದಿಗಳಿಗೂ ಸಂಭವಿಸುತ್ತವೆ. ಅವರಿಗೂ ಅದೇ ಸಂಭವಿಸಿತು. ಪವಿತ್ರ ಖುರ್‌ಆನ್ ಮತ್ತು ಹದೀಸುಗಳಿಂದ ದೃಢೀಕರಿಸದ ಸೂಫಿಗಳ ತಪ್ಪು ನಿಯಮಗಳನ್ನು ಅನುಸರಿಸಿದ ಪರಿಣಾಮ ಇದು ಎಂದು ಅವರು ಹೇಳಿದರು.  (ಮಲ್ಫೂಝಾತ್, ಸಂಪುಟ–10, ಪುಟ–5–6, 1984)

ಒಂದು ಪಕ್ಷ ಇದನ್ನು ಸಾರಸಗಟಾಗಿ ನಂಬುವುದೇ ಇಲ್ಲ, ಮತ್ತೊಂದು ಪಕ್ಷವು ಅದನ್ನು ನಂಬುತ್ತದೆ ಆದರೆ ಅತಿಶಯೋಕ್ತಿಗಳಾಗಿದ್ದಾರೆ. ನಂಬದವರು ಸೂಫಿಗಳಿಂದ, ನಂಬುವವರು ತಪ್ಪು ರೀತಿಯ ಜನರ ವ್ಯಾಖ್ಯಾನಗಳಿಂದಾಗಿ, ತಪ್ಪು ದಾರಿಯನ್ನು ಹಿಡಿಯುವಂತಾಗುತ್ತದೆ. ಆದುದರಿಂದ ಇದು ಷರಿಯಾ ಕಾನೂನು ಮತ್ತು ಪ್ರಕೃತಿಯ ನಿಯಮ ಮತ್ತು ಪ್ರವಾದಿಗಳ ಪವಾಡಗಳ ಅಡಿಯಲ್ಲಿ ಪರಿಗಣಿಸಬೇಕು ಎಂದು ನೆನಪಿಡಿರಿ. ಪ್ರವಾದಿಗಳಿಗಿಂತ ಹೆಚ್ಚು ಪವಾಡಗಳನ್ನು ಯಾರೂ ತೋರಿಸಲಾರರು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ.

ಪವಿತ್ರ ಖುರ್‌ಆನ್ ವಾಸ್ತವಿಕ ದೇವನ ಬಗ್ಗೆ ಪ್ರಸ್ತಾಪಿಸುತ್ತದೆ. ನಾವು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಬೇಕು. ಪವಿತ್ರ ಖುರ್‌ಆನ್ ಬಲಹೀನನಾದ, ಆತ್ಮಗಳ ಒಡೆಯನಾಗಿರದ, ಮೋಕ್ಷ ನೀಡಲು ಸಾಮರ್ಥ್ಯವಿಲ್ಲದ, ಪಶ್ಚಾತ್ತಾಪವನ್ನು ಸ್ವೀಕರಿಸಲು ಅಸಮರ್ಥನಾದ ದೇವನ ಬಗ್ಗೆ ಪ್ರಸ್ತಾಪಿಸಿಲ್ಲ. ಪವಿತ್ರ ಖುರ್‌ಆನ್‌ನ ಪ್ರಕಾರ ನಾವು ಎಂತಹ ದೇವನ ದಾಸರಾಗಿದ್ದೇವೆಂದರೆ ಆ ದೇವನು ಸೃಷ್ಟಿಕರ್ತನೂ, ಒಡೆಯನೂ, ಆಹಾರ ನೀಡುವವನೂ, ರಹ್ಮಾನ್, ರಹೀಮ್ ಮತ್ತು ಶಿಕ್ಷೆ ಶಿಕ್ಷೆಗಳ ದಿನದ ಮಾಲೀಕನೂ ಆಗಿದ್ದಾನೆ. ಸತ್ಯವಿಶ್ವಸಿಗಳು ಕೃತಜ್ಞರಾಗಿರಬೇಕಾಗಿದೆ. ಅಲ್ಲಾಹನು ನಮಗೆ ಎಂತಹ ಗ್ರಂಥವನ್ನು ನೀಡಿರುವರೆಂದರೆ ಅದರಲ್ಲಿ ಅವನ ನೈಜ ಗುಣಗಳು ವಿವರಿಸಲಾಗಿದೆ. ಇದು ಅಲ್ಲಾಹನ ಬಹಳ ದೊಡ್ಡ ಅನುಗ್ರಹವಾಗಿದೆ.

(ಮಲ್ಫೂಝಾತ್, ಸಂಪುಟ–10, ಪುಟ–98, ಸಂಚಿಕೆ 1984)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ

ಸೂಕ್ಷ್ಮಜ್ಞಾನ ಮತ್ತು ಪವಿತ್ರ ಖುರ್‌ಆನ್‌ನ ವೈಶಿಷ್ಟ್ಯಗಳು ಮತ್ತು ಅದರ ಮಹೋನ್ನತ ಸ್ಥಾನ ಮೊದಲಾದವುಗಳಿಗೆ ಸಂಬಂಧಿಸಿ ಇನ್‌ಶಾಅಲ್ಲಾಹ್ ಮುಂದೆಯೂ ವಿವರಿಸಲಾಗುವುದು. ಈಗ ಇಲ್ಲಿಗೆ ಇದನ್ನು ಕೊನೆಗೊಳಿಸುತ್ತೇನೆ. ಏಕೆಂದರೆ ಈಗ ನನಗೆ ಕೆಲ ಹುತಾತ್ಮರ ಬಗ್ಗೆಯೂ ವಿವರಿಸಬೇಕಾಗಿದೆ. ಅಲ್ಲಾಹನು ನಮಗೆ ಈ ವಿಷಯಗಳನ್ನು ಮನವರಿಕೆ ಮಾಡಲು, ಕಾರ್ಯಾನಿರತರಾಗಲು, ಪವಿತ್ರ ಖುರ್‌ಆನ್ ಓದಲು ಮತ್ತು ಮನವರಿಕೆ ಮಾಡಲು ಭಾಗ್ಯವನ್ನು ದಯಪಾಲಿಸಲಿ. ಆಮೀನ್

ಇದೀಗ ವಿಶೇಷವಾಗಿ ಬಾಂಗ್ಲಾದೇಶದಲ್ಲಿ ಹುತಾತ್ಮರಾದವರ ಬಗ್ಗೆ ವಿವರಿಸಬಯಸುತ್ತೇನೆ. ಅನಂತರ ನಮಾಝ್ ಜನಾಝ್ ಸಹ ನಿರ್ವಹಿಸಿಕೊಡುವೆನು. ನಾವೆಲ್ಲರೂ ತಿಳಿದಿರುವಂತೆ ಹಿಂದಿನ ಶುಕ್ರವಾರ ಬಾಂಗ್ಲಾದೇಶದಲ್ಲಿ ಜಲ್ಸ ನಡೆಯುತ್ತಿತ್ತು. ಜಲ್ಸ ನಡೆಯುತ್ತಿರುವ ಮಧ್ಯದಲ್ಲೇ ದಂಗೆಕೋರರು ಮತ್ತು ಭಯೋತ್ಪಾದಕರು ಹಲ್ಲೆ ನಡೆಸಿದರು. ಸರಕಾರ ಮತ್ತು ಪೋಲೀಸ್ ವ್ಯವಸ್ಥೆ ಭದ್ರತೆ ಬಗ್ಗೆ ನೀಡಿದ ದೃಢವಾದ ಭರವಸೆ ಮೇರೆಗೆ ಈ ಜಲ್ಸ ನಡೆಸಲಾಗಿತ್ತು. ಆದರೆ ದಂಗೆಕೋರರು ಆಕ್ರಮಿಸಿದಾಗ ಪೋಲೀಸರು ಕೇವಲ ವೀಕ್ಷಕರಾಗಿ ನಿಂತರು. ಅನಂತರ ಮೇಲಿನಿಂದ ಆಜ್ಞೆ ಲಭಿಸಿದಾಗ ಕಾರ್ಯನಿರತರಾದರು. ಆದರೆ ಅಷ್ಟರೊಳಗೆ ಹಿಂಸಾಚಾರ ಅತ್ಯಂತ ಹೆಚ್ಚಾಗಿತ್ತು. ಅಂತೂ ಈ ದಂಗೆಯಲ್ಲಿ ನಮ್ಮ ಓರ್ವ ಸಹೋದರ, ಝಾಹಿದ್ ಹಸನ್ ಸಾಹಿಬ್ ಹುತಾತ್ಮರಾದರು. ಅವರು ಅಬೂಬಕರ್ ಸಿದ್ದೀಖ್ ಸಹಿಬ್ ಬಾಂಗ್ಲಾ ದೇಶದ ಪುತ್ರರಾಗಿದ್ದರು. **ಇನ್ನಾ ಅಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**.

ನೇಷ್ಣನಲ್ ಅಮೀರರಾದ ಅಬ್ದುಲ್ ಅವ್ವಲ್ ಸಾಹಿಬ್ ಬರೆಯುತ್ತಾರೆ. ಝಾಹಿದ್ ಹಸನ್ ಸಾಹಿಬ್ ಮಾರ್ಚ್ 3 ರಂದು ಅಹ್ಮದ್ ನಗರ, ಪಂಜುಗಢ ಜಿಲ್ಲೆಯಲ್ಲಿ ಆಯೋಜಿಸಲಾಗಿದ್ದ ಜಲ್ಸ ಸಂದರ್ಭದಲ್ಲಿ Gate ಮತ್ತು ಆವರಣದ ಕಾವಲು ನಡೆಸುತ್ತಿರುವ ವೇಳೆ ವಿರೋಧಿಗಳ ಹಲ್ಲೆಯ ಪರಿಣಾಮವಾಗಿ 25 ವರ್ಷಗಳ ವಯಸ್ಸಿನಲ್ಲಿ ಹುತಾತ್ಮರಾದರು. **ಇನ್ನಾ ಅಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಮೃತರು 2019 ರಲ್ಲಿ ಬೈಅತ್ ಮಾಡಿದ್ದರು. ಬೈಅತ್ ಮಾಡಿದ ಮುರು ತಿಂಗಳ ಅವಧಿಯಲ್ಲೇ ವಸೀಯತ್ತಿನ ಅರ್ಜಿ ಸಲ್ಲಿಸಿದರು. ಅವರ ಕುಟುಂಬ ಅಹ್ಲೆಹದೀಸ್ ಪಂಥಕ್ಕೆ ಸೇರಿದವರಾಗಿದ್ದರು. ಅಹ್ಮದಿಯತ್ ಸ್ವೀಕಾರದ ನಂತರ ಶಹೀದರಾದರು. ತಮ್ಮ ತಂದೆಗೆ ತಬ್ಲೀಗ್ಹ್ ಮಾಡಲು ಪ್ರಾರಂಭಿಸಿದರು. ಅದರ ಪರಿಣಾಮವಾಗಿ 2020 ರಲ್ಲಿ ಅವರ ತಂದೆ ತಾಯಿಯರು ಸಹ ಬೈಅತ್ ಮಾಡುವ ಭಾಗ್ಯ ಪಡೆದರು. ಬೈಅತ್ ಮಾಡಿದ ನಂತರ ಶಹೀದರಾದರು. ತಪ್ಪದೇ ನನಗೆ ಪತ್ರ ಬರೆಯುತ್ತಿದ್ದರು.

ಅವರ ಬೈಅತ್ ಮಾಡುವ ಮತ್ತು ಅಹ್ಮದಿಯಾದ ಘಟನೆ ಹೀಗಿದೆ. ಮುಹಮ್ಮದ್ ರಫತ್ ಹುಸೇನ್ ಅವರ ಸಹಪಾಠಿಗಳಾಗಿದ್ದರು. ಅವರು ಬೋಗ್ರಾ ನಗರದಲ್ಲಿ (Pundra University of science) ನಲ್ಲಿ ಅಧ್ಯಯನ ಮಾಡುತ್ತಿದ್ದರು. ಇವರಿಬ್ಬರೂ Science and Technology ನಲ್ಲಿ B.S.c ಮಾಡುತ್ತಿದ್ದರು. ಆ ಅಹ್ಮದಿ ಗೆಳೆಯನು ಅವರಿಗೆ ತಬ್ಲೀಗ್ಹ್ ಮಾಡಿದರು. ಎರಡು ವರ್ಷಗಳ ತಬ್ಲೀಗ್ಹ್ ನಂತರ ಅವರ ಮೇಲೆ ಅಹ್ಮದಿಅತ್ತಿನ ಸತ್ಯ ಅನಾವರಣ ಆದಾಗ ಅವರು ಬೈಅತ್ ಮಾಡಿದರು. ಅವ್ವಲ್ ಸಾಹಿಬ್ ಬರೆಯುತ್ತಾರೆ. ಜಲ್ಸ ಸಾಲಾನ ಪ್ರಾರಂಭವಾಗುತ್ತಲೇ ನಾಲ್ಕೂ ಕಡೆಯಿಂದ ಮುಲ್ಲಾಗಳು ತಮ್ಮ ಗುಂಪುಗಳ ಜೊತೆಗೂಡಿ ಜಲ್ಸ ಸ್ಥಳದ ಗೋಡೆ ಮತ್ತು ಪಶ್ಚಿಮ ಭಾಗದಲ್ಲಿರುವ Gate ನ ಮೇಲೆ ಹಲ್ಲೆ ನಡೆಸತೊಡಗಿದರು. ಕಲ್ಲೆಸೆತ ಅಲ್ಲದೇ ದೇಸಿ ಆಯುಧಗಳಿಂದ ಹಲ್ಲೆ ನಡೆಸುತ್ತಿದ್ದರು. ಸಂದರ್ಭ ದೊರೆತಾಗಲೆಲ್ಲ ಅವರು ಬೆಂಕಿ ಹಚ್ಚತೊಡಗಿದರು. ಖುದ್ದಾಮ್ (ಯುವಕರು) ತುಂಬಾ ಶೌರ್ಯದಿಂದ ತನ್ನ ಕರ್ತವ್ಯಗಳನ್ನು ಪೂರೈಸುತ್ತಿದ್ದರು. ಸಾಮಾನ್ಯತಃ ಹೊರಗೆ ಹೋಗಲು ಅವಕಾಶವಿರಲಿಲ್ಲ. ಕರ್ತವ್ಯದಲ್ಲಿರುವವನರ್ನು ಹೊರತುಪಡಿಸಿ ಎಲ್ಲರೂ, ಖುದ್ದಾಮ್ ಒಳಗಡೆಯೇ ಇದ್ದರು. ಒಳಗೆ ಸುರಕ್ಷಿತ ಕಾರ್ಯದಲ್ಲಿದ್ದರು. ಹೇಳುತ್ತಾರೆ. ಜಲ್ಸ ಪ್ರಾರಂಭವಾದ ಒಂದು ಮುಕ್ಕಾಲು ಗಂಟೆಯ ನಂತರ ದಂಗೆಕೋರರು ಗೋಡೆ ಒಡೆಯಲು ಯಶಸ್ವಿಯಾದಾಗ ಖುದ್ದಾಮರನ್ನು ಯಾವುದೇ ಬೆಲೆತೆತ್ತು ಸುರಕ್ಷತೆಗೆ ಆದ್ಯತೆ ಕೊಡುವಂತೆ ಹೇಳಲಾಯಿತು. ಆ ಸಮಯ ಗೇಟ್ ನಂಬರ್ ಒಂದರಲ್ಲಿ ನಿಯುಕ್ತರಾಗಿದ್ದ ಝಾಹಿದ್ ಹಸನ್ ಹುತಾತ್ಮರು ತನ್ನ ಮಿತ್ರರ ಒಳಗೂಡಿ ಗೇಟ್‌ನಿಂದ ಹೊರಟು ಜಲ್ಸಸ್ಥಳದ ಗೋಡೆಯತ್ತ ದಂಗೆಕೋರರನ್ನು ಸರಿಸಲು ಅತ್ಯಂತ ವೇಗವಾಗಿ ಹಾಗೂ ಶೌರ್ಯದಿಂದ ಅಲ್ಲಿಗೆ ತಲುಪಿದರು. ಆ ನಡುವೆ ಒಂದು ಸಂದರ್ಭ ಹೀಗೆ ಬಂತು. ಅವರನ್ನು ಎದುರಿಸುತ್ತಾ ಎದುರಿಸುತ್ತಾ ಮಿತ್ರರಿಂದ ದೂರವಾದರು. ಆ ಸಂದರ್ಭದ ಅವಕಾಶ ಪಡೆದು ಒಬ್ಬಂಟಿಯಾದ ಅವರ ಮೇಲೆ ದಂಗೆಕೋರರು ಮುಗಿಬಿದ್ದರು. ಅವರ ತಲೆಯ ಹಿಂದೆ ಚಪ್ಪಲಿಯಿಂದ ಅಥವಾ ಯಾವುದೇ ಇನ್ನಿತರ ಹರಿತ ಆಯುಧದಿಂದ ಹಲ್ಲೆ ನಡೆಸಿದರು. ಮತ್ತು ಅವರನ್ನು ಎಳೆಯುತ್ತ ಸ್ವಲ್ಪ ದೂರದವರೆಗೆ ಹೊದರು ಅವರ ಮುಖದ ಮೇಲೆ ಮತ್ತು ಶರೀರದ ಇತರ ಭಾಗಗಳ ಮೇಲೆ ಅತ್ಯಂತ ಕ್ರೂರಿತನದಿಂದ ಮತ್ತು ಬರ್ಬರತೆಯಿಂದ ಹಲ್ಲೆ ನಡೆಸಿ ಅವರು ತನ್ನ ಮೃಗತ್ವದ ಸಾಕ್ಷ್ಯ ನೀಡಿದರು.

ಹುತಾತ್ಮರಾದ ಝಾಹಿದ್ ಹಸನ್ ಅವರನ್ನು ಎಷ್ಟೊಂದು ಕ್ರೂರಿತನದಿಂದ ಹತ್ಯೆ ಮಾಡಿದ್ದಾರೆಂದರೆ ಅವರನ್ನು ಗುರುತಿಸಲು ಸುಮಾರು ಎರಡು ಗಂಟೆ ಹಿಡಿಯಿತು. ಇದಾಗಿದೆ ಈ ಮುಸ್ಲಿಮರ ಅವಸ್ಥೆ. ಅಲಾಹ್ ಮತ್ತು ಅವನ ಪ್ರವಾದಿಯ ಹೆಸರಿನ ಮೇಲೆ ಹಿಂಸೆಯ ಮೇರೆಯನ್ನು ಮೀರಿದರು. ಹಝ್ರತ್ ಪೈಗಂಬರ್ (ಸ) ರವರಂತೂ ಯುದ್ಧಗಳಲ್ಲಿ ಅಮುಸ್ಲಿಮರನ್ನು ಸಹ ಶವಗಳನ್ನು ಕೆಡಿಸಲು ಹೇಳಿರಲಿಲ್ಲ. ಆದರೆ ಈ ಜನರು ಅಲ್ಲಾಹ್ ಮತ್ತು ಅವನ ಪ್ರವಾದಿಯ ಹೆಸರು ಜಪಿಸುವವರ ಜೊತೆ ಈ ರೀತಿಯ ವರ್ತನೆ ಸಾಧಿಸುತ್ತಿದ್ದಾರೆ.

ಅಲ್ಲಾಹನು ಅವರಿಗೆ ಹಿಡಿಗೊಡಿಸಲಿ ಮತ್ತು ಅವರನ್ನು ಮಣ್ಣುಗೂಡಿಸಲಿ, ಹೇಳುತ್ತಾರೆ. ಅವರ ಗುರುತಿನ ಚೀಟಿ ಸಹ ದಂಗೆಕೋರರು ಬೇರ್ಪಡಿಸಿದರು, ಅವರ ಕೊರಳಿನಿಂದ ಇಲಿಸಿಕೊಂಡರು. ಆದರೆ ಖುದ್ದಾಮ್ (ಯುವಕರು) duty ವಸ್ತುಗಳನ್ನು ಹಾಕಿಕೊಂಡಿದ್ದರು. ಆದುದರಿಂದ ಗುರುತಿಸಲು ಒಂದಿಷ್ಟು ಸಹಾಯವಾಯಿತು. ಹೀಗೆ ಅವರ ಶವಗಳನ್ನು ಪಡೆಯಲಾಯಿತು. ನಮಾಝ್ ತಹಜ್ಜುದ್ ಮತ್ತು ಫಜರ್ ನಮಾಝ್ ನಂತರ ಅವರ ಜನಾಝ್ ನಮಾಝ್ ನಿರ್ವಹಿಸಲಾಯಿತು. ಜಲ್ಸಕೋಸ್ಕರ ದೇಶದಾದ್ಯಂತದಿಂದ ಸಾವಿರಾರು ಸಂಖ್ಯೆಯಲ್ಲಿ ಬಂದಿದ್ದರು. ಅವರೆಲ್ಲರೂ ಅದರಲ್ಲಿ ಪಾಲ್ಗೊಂಡರು. ಅಂತ್ಯಕ್ರಿಯೆಯ ಪ್ರಾರ್ಥನೆ ಸಮಯದಲ್ಲಿ ಅಲ್ಲಿದ್ದವರ ಮೇಲೆ ಅಭೂತಪೂರ್ವ ಪರಿಸ್ಥಿತಿ ಇತ್ತು. ಅಲ್ಲಿ ದೊಡ್ಡ ದುಃಖ ಆವರಿಸಿತ್ತು. ಎಲ್ಲರೂ ದೇವರ ಸನ್ನಿಧಿಯಲ್ಲಿ ಬಿಕ್ಕಿ ಬಿಕ್ಕಿ ಅಳುತ್ತಿದ್ದರು ಬಳಿಕ ಕಾನೂನಿನ ರೀತ್ಯ ಶವದ ಮರಣೋತ್ತರ ಪರೀಕ್ಷೆ ನಡೆಯಿಸಿ ಎರಡು ಗಂಟೆಯ ನಂತರ ಹುತಾತ್ಮ ಯೋಧನ ಮೃತ ದೇಹವನ್ನು ಅಂಬುಲೆನ್ಸ್‌ನಲ್ಲಿ ಸ್ವಗ್ರಾಮಕ್ಕೆ ಕಳುಹಿಸಲಾಯಿತು. ಅಲ್ಲಿ ರಾತ್ರಿ ಹತ್ತು ಗಂಟೆಗೆ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಹುತಾತ್ಮ ಯೋಧನ ನಿಕಟ ಮಿತ್ರರು ರಫತ್ ಹುಸೇನ್ ಸಾಹಿಬ್ ಹೇಳುತ್ತಾರೆ. ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿ ಜೀವನದ ನಡುವೆ ಅವರೊಡನೆ ತುಂಬಾ ಮೈತ್ರಿಯಾಗಿತ್ತು. ಅವರು ತುಂಬಾ ಸಜ್ಜನ ವ್ಯಕ್ತಿಯಾಗಿದ್ದರು. ಆದರೆ ಆರಾಧನೆಗಳಲ್ಲಿ ಅವರ ಅಭಿರುಚಿ ತುಂಬಾ ಕಡಿಮೆ ಇತ್ತು. ಆದರೆ ಅಹ್ಮದಿಅತ್ ಸ್ವೀಕಾರದ ನಂತರ ಅವರ ಸ್ಥಿತಿ ಪಲ್ಲಟಗೊಂಡಿತು. ಬಾಜಮಾಅತ್ ನಮಾಝಿನ ರೂಢಿಯಾಯಿತು. ಅವರು ತುಂಬಾ ಸರಳ ವಿನಯವಂತರಾಗಿದ್ದರು. ಐದು ವರ್ಷಗಳ ಅವಧಿಯಲ್ಲಿ ನಾನು ಅವರಿಗೆ ಎಂದೂ ಗಟ್ಟಿ ಧ್ವನಿಯಲ್ಲಿ ಮಾತನಾಡಿದ್ದು ಕಂಡಿಲ್ಲ. ಅವರ ಸಜ್ಜನಿಕೆ, ಭಾಗ್ಯಂವತಿಕೆ ನಾವು ಹೀಗೆ ಗುರುತಿಸಬಹುದು. ಅವರು ಬೈಅತ್ ಮಾಡಿದ ಕೆಲವೆ ತಿಂಗಳುಗಳಲ್ಲಿ ವಸೀಯ್ಯತ್ ಮಾಡುವ ಭಾಗ್ಯ ಪಡೆದರು. ಮತ್ತು ಹೇಳುತ್ತಾರೆ. ಝಾಹಿದ್ ಹಸನ್ ಶಹೀದ್ ಖುದ್ದಾಮುಲ್ ಅಹ್ಮದಿಯ ಸಕ್ರಿಯ ಕಾರ್ಯಕರ್ತರಾಗಿದ್ದರು. ಶಹಾದತ್ತಿನ ಸಮಯ ಢಾಕಾ ಮತ್ತು ಬ್ರಿಸಾಲ್ ಕ್ಷೇತ್ರಗಳಲ್ಲಿ ಖುದ್ದಮುಲ್ ಅಹ್ಮದಿಯರ ಜಾಟಿ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಅಲ್ಲದೇ ಢಾಕಾದ ಮೇಲೆ ಝಿಲ್ ವಲಯದ ಝಈಮ್ ಸಹ ಆಗಿದ್ದರು.

ಅದೆ ಮಜ್ಲಿಸಿನ ಖಾಯಿದ್ ಮತ್ತು Local ಮೊಹ್ತಮಿಮ್ ಮಾನ್ಯ ಝುಹೂರುಲ್ ಇಸ್ಲಾಂ ಸಾಹಿಬ್ ಹೇಳುತ್ತಾರೆ. ಅವರು ಮಜ್ಲಿಸಿನ ಕಾರ್ಯಗಳಲ್ಲಿ ತುಂಬಾ ಪ್ರವಾಣೀಕರು ಮತ್ತು ಹಿರಿಯರನ್ನು ಗೌರವಿಸುತ್ತಿದ್ದರು. ತಮಗೆ ದೊರೆತ ಕೆಲಸ ಅತ್ಯಂತ ಉತ್ಸಾಹದಿಂದ ನಿರ್ವಹಿಸುತ್ತಿದ್ದರು. ಸಲಾಂ ಮಾಡಲು ಯಾವಾಗಲೂ ಮುಂದಿರುತ್ತಿದ್ದರು. ಸದಾ ಮುಗುಳ್ನಗುತ್ತಿದ್ದರು. ವರ್ಷ ಅಥವಾ ಒಂದೂವರೆ ವರ್ಷ ಮುಂಚೆ B.sc. ಉತ್ತೀರ್ಣಗೊಳಿಸಿದ ನಂತರ ಒಂದು company ನಲ್ಲಿ ಕೆಲಸ ಪ್ರಾರಂಭಿಸಿದರು. ಕೆಲಸದ ನಿಮಿತ್ತ ಢಾಕಾ ಅಥವಾ ಅದರಿಂದ ದೂರ ಹೋಗಬೇಕಾದರೆ, ಸಂದರ್ಭಶ: ಸಮೀಪದ ಮಜ್ಲಿಸುಗಳ ಕಾರ್ಯ ನೋಡಿಕೊಳ್ಳುತ್ತಿದ್ದರು. ಅವರ ಫೇಸ್‌ಬುಕ್ ಅಕೌಂಟಿನಲ್ಲಿ ವೈಯಕ್ತಿಕ ಪ್ರೋಫೈಲ್ ಮೇಲೆ "ವ ಮ್ಯನ್ ಯತವಕ್ಕಲ್ ಅಲಲ್ಲಾಹಿ ಫಹುವ ಹಸ್‌ಬುಹು" (ಅತ್ತಲಾಖ್-4) ವಚನದ ಅನುವಾದ ಬರೆದಿತ್ತು.

ಮುರಬ್ಬಿ ಶರೀಫ್ ಅಹ್ಮದ್ ಸಾಹಿಬ್ ಹೇಳುತ್ತಾರೆ. ನಾನು ತೆಬಾಳಿಯ ಜಮಾಅತಿನಲ್ಲಿ ನಿಯುಕ್ತನಾದ ಸಮಯ ಹುತಾತ್ಮರು ತನ್ನ ಮಿತ್ರ ರಫಅತ್ ಹುಸೇನ್ ಸಹಿಬ್ ಅವರ ಜೊತೆ ತಬ್ಲೀಗ್ಹ್ ವಿಷಯವಾಗಿ ಆಗಮಿಸಿದ್ದರು. ಅವರು ಬೈಅತ್ ಮಾಡುವ ಇಚ್ಛೆ ವ್ಯಕ್ತಪಡಿಸಿದಾಗ, ನಾನು ಅವರಿಗೆ ಇನ್ನಷ್ಟು ಸಮಯ ಅಧ್ಯಯಯನ ನಡೆಸಲು ಹೇಳಿದ್ದೆ. ಆಗ ಅವರು ಹೇಳಿದರು. ನಾನು ಜಮಾಅತಿನ ಸತ್ಯ ಮನವರಿಕೆ ಮಾಡಿಕೊಂಡಿದ್ದೇನೆ.

ಆದರೂ ತಾವು ಹೇಳುವ ಪ್ರಕಾರ, ಸ್ವಲ್ಪ ಸಮಯ ನಂತರ ಬಂದು ಬೈಅತ್ ಮಾಡುವೆನು. ಅಂದಹಾಗೆ ಸ್ವಲ್ಪ ಸಮಯದ ನಂತರ ಅವರು ಬೈಅತ್ ಮಾಡಿಕೊಂಡಿದ್ದರು. ಮುರಬ್ಬಿ ಸಾಹಿಬರು ಹೇಳುತ್ತಾರೆ. ಅವರು ಬೈಅತ್ ಮಾಡಿದ ನಂತರ ಅಹ್ಮದಿಅತ್ ಮತ್ತು ಖಿಲಾಫತ್ ಇಝಾಮ್ ಮನವರಿಕೆ ಮಾಡಿಕೊಳ್ಳುವ ಪ್ರಯತ್ನ ಮಾಡಿದರು. ಮತ್ತು ಖಿಲಾಫತ್ ನಿಝಾಮ್ ಮನವರಿಕೆ ಮಾಡಿಕೊಳ್ಳುವ ಪ್ರಯತ್ನ ಮಾಡಿದರು. ತುಂಬಾ ಆಳವಾಗಿ ಜ್ಞಾನ ಪಡೆದರು. ನನಗೂ ಸಹ ಪತ್ರ ಬರೆಯುತ್ತಿದ್ದರು. ಅವರ ಅಂತಿಮ ಪತ್ರ, ಅದು ಅವರು ಜಲ್ಸಕ್ಕೆ ಹೇಳುವ ಸಮಯ ಬರೆದಿದ್ದರು. ನಾವು Train ನಲ್ಲಿ ಜಲ್ಸಕ್ಕೆ ಹೋಗುತ್ತಿದ್ದೇವೆ. ಶತ್ರುಗಳು ಭಯಾನಕ ಯೋಜನೆಗಳನ್ನು ಹಾಕುತ್ತಿದ್ದಾರೆ. ಕೆಲ ಸ್ಥಳಗಳಲ್ಲಿ ಅವರು ಬೆಂಕಿ ಸಹ ಹಚ್ಚಿದ್ದಾರೆ. ಆದರೆ ಅವು ಇನ್ ಶಾ ಅಲಾಹ್ ಜಲ್ಸ ಮಾಡುವೆವು ಎಂಬ ತನ್ನ ವಿಶ್ವಾಸ ವ್ಯಕ್ತಪಡಿಸಿದರು. ಅಲ್ಲದೇ ತಮ್ಮ ಸಂಬಂಧಿಕರು ಮತ್ತು ತಮ್ಮ ಊರಿನವರೆಲ್ಲರೂ ಅಹ್ಮದಿಯಾಗುವಂತೆ ಇಚ್ಛೆ ವ್ಯಕ್ತಪಡಿಸಿದರು. ಇದು ನನಗೆ ಬರೆದ ಅವರ ಅಂತಿಮ ಪತ್ರವಾಗಿತ್ತು

ಓರ್ವ ಖಾದಿಮರು ಹೇಳುತ್ತಾರೆ. ಅವರು ಎಷ್ಟೊಂದು ವಿನಮ್ರ ಸ್ವಭಾವದವರಾಗಿದ್ದರೆಂದರೆ, ಅವರಿಗೆ ಯಾವುದೆ ಹೇಳಿದ ಕೆಲಸಕ್ಕೆ ಆಗುವುದಿಲ್ಲ ಎಂದು ಹೇಳುತ್ತಿರಲಿಲ್ಲ. ಒಮ್ಮೊಮ್ಮೆ ನಾನು ಅವರಿಗೆ ತಮಾಷೆಯಾಗಿ ಹೇಳುತ್ತಿದ್ದೆ, ಝಾಹಿದ್ ಭಾಯಿ, ನಾವು ಇಷ್ಟೆಲ್ಲಾ ಕೆಲಸ ಮಾಡಿದರೆ ಸತ್ತು ಹೋಗುವೆವು. ಇದು ಕೇಳಿಯೂ ಅವರು ನಗುತ್ತಿದ್ದರು. ಶಹೀದರು ಮೂಸಿಯಾಗಿದ್ದರು. ನಾನು ಹೇಳಿದೆ. ನೀವು ಇಷ್ಟು ಬೇಗ ವಸೀಯ್ಯತ್ ಮಾಡಲು ಏನು ಕಾರಣ? ಆಗ ಅವರು ಹೇಳಿದರು. ಇಮಾಮ್ ಮಹ್‌ದಿ ಸತ್ಯವಂತರಾಗಿದ್ದರು. ಅವರು ಹೇಳಿದ್ದೆಲ್ಲಾ ಸತ್ಯವಾಗಿದೆ. ಅವರು ವಸೀಯ್ಯತ್ ಮಾಡಲು ಹೇಳಿದ್ದಾರೆ. ಆದುದರಿಂದ ನಾನು ವಸೀಯ್ಯತ್ ಮಾಡಿದೆ. ನಾನು ಅವರ ಈ ಮಾತು ಕೇಳಿ ಆಶ್ಚರ್ಯಗೊಂಡೆ, ಅವರು ಹಝ್ರತ್ ಮಸೀಹ್ ಮೌಊದ್(ಅ) ಅವರ ಮೇಲೆ ಎಷ್ಟೊಂದು ನಿಷೆ ಹೊಂದಿದ್ದಾರೆ ಎಂದು, ಮತ್ತು ಹೇಳುತ್ತಾರೆ. ನಾನು ಒಂದು ಸಂದರ್ಭದಲ್ಲಿ ಅವರನ್ನು ಕೇಳಿದೆ. ಅಹ್ಮದಿಯತ್ ಸ್ವೀಕರಿಸಲು ಮೂಲ ಕಾರಣವೇನು, ಆಗ ಅವರು ಹೇಳಿದರು. ಇಲ್ಲಿಯವರೆಗೆ ನಾನು ಇಮಾಮ್ ಮಹದಿ ಅಥವಾ ಮಸೀಹ್ ಮತ್ತು ನಬಿಯ ವಾದ ಮಾಡುವ ಯಾವ ವ್ಯಕ್ತಿಗೆ ಆಗಲಿ ಅಥವಾ ಜಮಾಅತ್ ಆಗಲಿ ಯಶಸ್ವಿಗೊಂಡಿದ್ದನ್ನು ಕಾಣಲಿಲ್ಲ. ಕೇವಲ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಖಾದಿಯಾನಿ (ಅ)ರವರು ಆಗಿದ್ದಾರೆ. ಅವರು ಸುಳ್ಳುಗಾರರಾಗುತ್ತಿದ್ದರೆ ಅವರ ಪಾಳು ಸಹ ಇತರರಂತೆಯೇ ಆಗುತ್ತಿತ್ತು.

ಶಹೀದ್‌ರ ತಂದೆ ತಾಯಿಯರು ಜೀವಂತವಾಗಿದ್ದಾರೆ. ಇಬ್ಬರೂ ಅಲ್ಲಾಹನ ಅನುಗ್ರಹದಿಂದ ಅಹ್ಮದಿಯರಾಗಿದ್ದಾರೆ. ಶಹೀದರು ತಮ್ಮ ತಂದೆ ತಾಯಿಯರ ಏಕೈಕ ಪುತ್ರರಾಗಿದ್ದರು. ಇನ್ನು ಮದುವೆ ಸಹ ಆಗಿರಲಿಲ್ಲ. ಇಬ್ಬರು ಸಹೋದರಿಯರಿದ್ದಾರೆ. ಇಬ್ಬರೂ ವಿವಾಹಿತರಾಗಿದ್ದಾರೆ. ಆದರೆ ಅಹ್ಮದಿಯೇತರಾಗಿದ್ದಾರೆ. ತಬ್ಲೀಗ್ಹ್ ಪಡೆಯುತ್ತಿದ್ದಾರೆ. ಅಲಾಹನು ಅವರ ತಂದೆ ತಾಯಿಯವರಿಗೆ ಸಾಂತ್ವನ ನೀಡಲಿ, ಧೈರ್ಯ ನೀಡಲಿ, ನಾನು ಹೇಳಿದಂತೆ ಅವರು ಏಕೈಕ ಪುತ್ರನಾಗಿದ್ದರಿಂದ ದುಃಖವು ಇಮ್ಮಡಿಯಾಗುತ್ತದೆ. ಅಲ್ಲಾಹನು ತನ್ನ ಅನುಗ್ರಹದಿಂದ ಅವರಿಗೆ ಸಹಿಸುವ ಶಕ್ತಿ ದಯೆ ಪಾಲಿಸಲಿ. ಶಹೀದರಿಗೆ ಸಹ ಸ್ವರ್ಗದಲ್ಲಿ ಉನ್ನತ ಸ್ಥಾನ ದೊರೆಯುವಂತೆ ಮಾಡಲಿ. ಅಂತೂ ಈ ಶಹೀದರು ಅಲ್ಲಾಹನ ವಚನದಂತೆ ಅಜರಮರಾದರು. ಅಲ್ಲಾಹನು ಸದಾ ಅವರೊಡನೆ ವಿಶೇಷ ರೀತಿಯ ಅನುಗ್ರಹ ದಯಪಾಲಿಸಲಿ. ಮತ್ತು ಆ ದೌರ್ಜನ್ಯಗಾರರನ್ನು ಸಹ ಹಿಡಿಯುವ ದಾರಿ ಸುಗಮಗೊಳಿಸಲಿ.

ಶತ್ರುಗಳು ಭಾವಿಸುವುದೇನೆಂದರೆ, ಅವರು ಜಮಾಅತಿನ ಜನರನ್ನು ಈ ರೀತಿ ಪರೀಕ್ಷಿಸಿ ಮತ್ತು ಕಠಿಣತೆ ಒಡ್ಡಿ ಅವರ ಧೈರ್ಯಗಳನ್ನು ಕುಂದಿಸಬಹುದೆಂದು, ಆದರೆ ಅದು ತದ್ವಿರುದ್ಧವಾಗಿದೆ, ಅಲ್ಲಿಂದಲೂ ನನಗೆ ಕೆಲವರಿಂದ ಪತ್ರಗಳು ಬಂದಿವೆ. ಕೆಲವು ಯುವಕರು ಸಹ ಬರೆದಿದ್ದಾರೆ. ಇನ್ನೆಷ್ಟು ಜೀವ ತೆತ್ತಬೇಕಾದರೂ ದುಆ ಮಾಡಿ ನಾವು ಅದಕ್ಕೆ ಸಿದ್ಧರಿದ್ದೇವೆ. ಇಂತಹ ಜನರನ್ನು ಆ ದುಷ್ಟರಿಂದ ಏನು ಮಾಡಲು ಸಾಧ್ಯ.

ಅಂತೂ ನಮಗೆ ಪ್ರಾರ್ಥಿಸಬೇಕಾಗಿದೆ. ಅಲ್ಲಾಹನು ನಮಗೆ ಅವರ ದುಷ್ಟತನದಿಂದ ರಕ್ಷಿಸುವಂತಾಗಲಿ ಮತ್ತು ಸದಾ ನಮ್ಮ ಮೇಲೆ ಅವನ ಕರುಣೆ ಹಾಗೂ ದಯೆಯಿರಲಿ. ಈ ಸಮಯ ಪ್ರಾರ್ಥನೆಗಳಿಗೆ ಹೆಚ್ಚು ಒತ್ತು ನೀಡಿರಿ.

ನಾನು ವಿವರಿಸಬಯಸುವ ಎರಡನೆ ಜನಾಝ, ಅದು ಅಲ್–ಜಝಾಯಿರ್‌ನ ಕಮಾಲ್ ಬಿದಾಹ್ ಸಾಹಿಬ್ ಅವರದ್ದಾಗಿದೆ.

ಫೆಬ್ರವರಿ ಎರಡರಂದು 57 ವಯಸ್ಸಿನಲ್ಲಿ ಅವರ ನಿಧನವಾಗಿದೆ. **ಇನ್ನಾ ಅಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅಬ್ದುಲ್ ಹಲೀಮ್ ಜಮಾಅತಿನ ಅಧ್ಯಕ್ಷರು ಬರೆಯುತ್ತಾರೆ. ಮೃತರು ಓರ್ವ ಸತ್ಯವಿಶ್ವಾಸಿ ಹಾಗೂ ನಿಷ್ಠಾವಂತ ಅಹ್ಮದಿಯರಾಗಿದ್ದರು. ಅವರು ತಮ್ಮ ಮನೆಯನ್ನು ಯಾವಾಗಲೂ ಜಮಾಅತಿನ ಕಾರ್ಯಗಳಿಗಾಗಿ, ನಮಾಝ್, ತಬ್ಲೀಗ್ಹ್ ಚಟುವಟಿಕೆಗಳಿಗಾಗಿ ತೆರೆದಿಟ್ಟರು. ಎಲ್ಲಾ ಅಹ್ಮದಿಗಳು ಅವರ ವಿಶ್ವಾಸಶಕ್ತಿ, ಅತಿಥಿ ಸತ್ಕಾರ ಮತ್ತು ಹೃದಯವಂತಿಕೆಯ ಸಾಕ್ಷಿ ನೀಡುವವರಾಗಿದ್ದಾರೆ. ಮೃತರು ತಮ್ಮ ಹಿಂದೆ ಪತ್ನಿ ಹಾಗೂ ಮೂರು ಮಕ್ಕಳು ಅಗಲಿ ಹೋಗಿದ್ದಾರೆ. ಅವರಲ್ಲಿ ಇಬ್ಬರು ಪುತ್ರರು ಅಹ್ಮದಿಯೇತರರಾಗಿದ್ದಾರೆ. ಮತ್ತು ಓರ್ವ ಪುತ್ರಿ ಅಹ್ಮದಿಯರಾಗಿದ್ದಾರೆ. ಅವರ ಪತ್ನಿ ಕರೀಮಾ ಸಾಹಿಬಾ ಸದರ್ ಲಜ್ನ ಆಗಿ ಸೇವೆ ಸಲ್ಲಿಸುವ ಭಾಗ್ಯ ಪಡೆದವರಾಗಿದ್ದಾರೆ.

ಅಲ್–ಜಝಾಯಿರ್‌ನಿಂದ ಹಸ್ಸಾನ್ ಝುವಾಲಿ ಸಾಹಿಬ್ ಹೇಳುತ್ತಾರೆ. ಕಮಾಲ್ ಬಿದಾಹ್ ಸಹಿಬ್ ಅತ್ಯಂತ ನಿಷ್ಠರು ಮತ್ತು ತುಂಬಾ ಸೇವಾ ಮನೋಭಾವದ ಅಹ್ಮದಿಯರಾಗಿದ್ದರು. ನೆರೆಹೊರೆಯರಿಂದ ಹಲವು ಅಡೆತಡೆಗಳಿದ್ದರೂ ಕೊನೆಯವರೆಗೂ ತಮ್ಮ ನೆಯನ್ನು ನಮಾಝ್‌ಗೋಸ್ಕರ ತೆರೆದಿಟ್ಟರಲಿ. ಜುಮುಅ ನಮಾಝ್‌ಗೆ ಬರುವವರನ್ನು ಕೆಲವೊಮ್ಮೆ ಸ್ವತ: ಊಟ ತಯಾರಿಸುತ್ತಿದ್ದರು. ಖಿದ್‌ಮತ್ ಖಲ್ಕ್ (ಜನಸೇವೆ) ಯ ವಿವಿಧ ಕಾರ್ಯಗಳಲ್ಲಿ ಮತ್ತು ರಕ್ತದಾನದಂತಹ ಕಾರ್ಯಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಮೃತರ ಮನೆಯಲ್ಲಿ ಜಮಾಅತಿನ ಕಾರ್ಯಗಳು ನಡೆಯುತ್ತಿದ್ದವು. ಹಬ್ಬದ ನಮಾಝ್ ಸಹ ಅವರ ಮನೆಯಲ್ಲೇ ಆಗುತ್ತಿತ್ತು. ಸರಕಾರದ ಮುಂದೆ ಹೋಗುವ ತಂಡದಲ್ಲಊ ಮೃತರು ಶಾಮಿಲಾಗಿದ್ದರು.

ಮೃತರು ಹೇಳುತ್ತಿದ್ದರು. ಅಲ್–ಜಝಾಯಿರ್ ಜಮಾಅತಿನ ಮೇಲೆ ಬರುವ ಆಪತ್ತುಗಳನ್ನೆಲ್ಲ ನಾವು ಒಂದು ಜಮಾಅತಿನ ಇತಿಹಾಸವನ್ನು ಬರೆಯುತ್ತಿದ್ದೇವೆ. ಈಗ ಮೃತರು ಸ್ವಯಂ ಆ ಇತಿಹಾಸದ ಭಾಗವಾದರು. ಅಲ್ಲಾಹನು ಅವರಿಗೆ ಮಗ್ಫಿರತ್‌ನ್ನು ನೀಡಲಿ. ದಯೆಯ್ನನು ತೋರಲಿ.

ಮುಂದಿನ ಜನಾಝ ಡಾ॥ ಶಮೀಮ್ ಮಲಿಕ್ ಸಾಹಿಬ ಅವರದ್ದಾಗಿದೆ. ಅವರು ಮಾನ್ಯ ಮಕ್ಸೂದ್ ಅಹ್ಮದ್ ಮಲಿಕ್ ಸಾಹಿಬ್ ಶಹೀದ್ ಲಾಹೋರ್‌ನ ಪತ್ನಿಯಾಗಿದ್ದಾರೆ. ಅವರು 2010 ರಲ್ಲಿ ದಾರುಝ್–ಝಿಕರಿನಲ್ಲಿ ಶಹೀದರಾಗಿದ್ದರು. ತಮ್ಮ ಪತಿಯ ಶಹಾದತ್ತಿನ ಕೆಲ ಅವಧಿಯ ನಂತರ ಅವರು ಕೆನಡಾ ಹೋಗಿದ್ದರು. ಅಲ್ಲೇ ಅವರ ನಿಧನವಾಗಿದೆ. ಮೃತರು P.hd ವರೆಗೆ ವಿದ್ಯೆ ಪಡೆದಿದ್ದರು. ಕಾಲೇಜುಗಳಲ್ಲಿ ಬೋಧಿಸುತ್ತಿದ್ದರು. ಪ್ರೊಫೆಸರ್‌ರಾದರು. H.Od ಹುದ್ದೆವರೆಗೆ ಪ್ರಗತಿ ಸಾಧಿಸಿದರು. ಆದರೂ ಅದರ ಜೊತೆಯಲ್ಲಿ ಮನೆಯ ಕೆಲಸ, ಮಕ್ಕಳ ಜವಾಬ್ದಾರಿ ಉತ್ತಮ ರೀತಿಯಲ್ಲಿ ನಿಭಾಯಿಸಿದರು. ಭೇದಭಾವವಿಲ್ಲದೆ ಎಲ್ಲಾ ವರ್ಗಗಳನ್ನು ಆತಿಥ್ಯ ನೀಡುತ್ತಿದ್ದರು. ಅಗತ್ಯಯುಳ್ಳವರ ಬಗ್ಗೆ ಕಾಳಜಿ ವಹಿಸುತ್ತಿದ್ದರು. ಅಹ್ಮದಿಯೆತರ ಬಾಂಧವರಿಗೆ ಮತ್ತು ಅಹ್ಮದಿಯೇತರ ಸಂಬಂಧಿಕರಿಗೆ ಸದಾ ತಬ್ಲೀಗ್ಹ್ ಅಲ್ಲಾಹನ ಮಾರ್ಗದೆಡೆ ಕರೆ ನೀಡುತ್ತಿದ್ದರು. ಹಝ್ರತ್ ಮಸೀಹ್ ಮೌಊದ್ (ಅ) ರವರ ಗ್ರಂಥಗಳನ್ನು ಅಭ್ಯಸಿಸುತ್ತಿದ್ದರು. ಅವರ ಜೀವಂತ ಅವಧಿಯಲ್ಲೇ ಪಂಜಾಬ್ ಯೂನಿವರ್ಸಿಟಿಯಲ್ಲಿ ಅವರ ಮೇಲೆ ಒಂದು thesis ಬರೆಯಲಾಯಿತು. thesis ಮರಣೋಪಂತ ಬರೆಯಲಾಗುತ್ತದೆ. ಆದರೆ ಅವರ ಮೇಲೆ ಅವರ ಜಿವನದಲ್ಲೇ ಬರೆಯಲಾಯಿತು. ಶಿಕ್ಷಣದ ಮೇಲೆ ಅವರಿಗೆ ತುಂಬಾ ಆಸಕ್ತಿಯಿತ್ತು. ಹಲವು ಜನರಿಗೆ ಅವರು ಖುರ್‌ಆನ್ ಸಹ ಬೋಧಿಸಿದ್ದಾರೆ. ನಮಾಝ್, ಉಪವಾಸ ಮತ್ತು ಪವಿತ್ರ ಖುರ್‌ಆನ್ ಪ್ರಮಾಣಿಕತೆಯಿಂದ ದಿನಾಲೂ ಪಠಿಸುತ್ತಿದ್ದರು. ತಹಜ್ಜುದ್ ಸಹ ನಿಯಮಿತ ರೂಪದಲ್ಲಿ ನಿರ್ವಹಿಸುತ್ತಿದ್ದರು. ಇಸ್ಲಾಮಿನ ಆರಾಧನೆಗಳೆಲ್ಲ ಕಟ್ಟುನಿಟ್ಟಾಗಿ ನಿರ್ವಹಿಸುತ್ತಿದ್ದರು. ಪರದೆ ಸಹಿತ ಕಾರ್ಯನಿರತರಾಗುತ್ತಿದ್ದರು. ನಿಷ್ಠರು, ಪ್ರಯಾಣಿಕರು ಆಗಿದ್ದರು. ಖಿಲಾಫತ್‌ನೊಂದಿಗೆ ವಿಶೇಷ ಒಲವುಯಿತ್ತು. ಮೃತರು ಮುಸಿಮಗಳಗಿದ್ದಳು. ಅಗಲಿರುವವರಲ್ಲಿ ಓರ್ವ ಪುತ್ರ ಮತ್ತು ನಾಲ್ಕು ಪುತ್ರಿಯರಾಗಿದ್ದರು. ಮಲಿಕ್ ತೌಹಿರ್ ಅಹ್ಮದ್ ಸಾಹಿಬ್ ಅಮೀರ್ ಜಮಾಅತ್ ಲಾಹೋರಿನ ಸಹೋದರಿಯಾಗಿದ್ದರು. ಅಲ್ಲಾಹನು ಅವರೊಡನೆ ಮಗ್ಫರತ್ ಮತ್ತು ಕರುಣೆಯನ್ನು ದಯಪಾಲಿಸಲಿ. ಅವರ ಸಂತಾನಕ್ಕೂ ವಂಶಕ್ಕೂ ಸಹ ಜಮಾಅತಿನ ನಿಷ್ಠಾವಂತನಾಗುವಂತೆ ಕರುಣಿಸಲಿ.

ಮುಂದಿನ ವಿವರ ಅಝೀಝುಮ್ ಫರ್ಹಾದ್ ಅಹ್ಮದ್ ಅವರು ಇರ್ಷಾದ್ ಅಹ್ಮದ್ ಸಾಹಿಬ್ ಜರ್ಮನಿಯರ ಪುತ್ರರು. ಇವರು 26 ವರ್ಷ ವಯಸ್ಸಿನಲ್ಲಿ ನಿಧನ ಹೊಂದಿದ್ದಾರೆ. **ಇನ್ನಾ ಅಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರು ಫ್ರೆಂಕ್‌ಫರ್ಟ್ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮಾಡುತ್ತಿದ್ದರು. ವಖ್ಫೆ ನೌ ನಂತಹ ಅನುಗ್ರಹಪೂರ್ಣ ವಿಭಾಗದಲ್ಲಿ ಶಾಮೀಲಾಗಿದ್ದರು. ನಿಧನಕ್ಕಿಂತ ಮುಂಚೆ ಮಜ್ಲಿಸ್ ಖುದ್ದಮುಲ್ ಅಹ್ಮದಿಯಾ local ಮತ್ತು ರೀಜ್ನಲ್ ಮಟ್ಟದಲ್ಲಿ ಸೇವೆ ಸಲ್ಲಿಸುವ ಭಾಗ್ಯ ಪಡೆದಿದ್ದರು. ಮೃತರು ಅತ್ಯಂತ ಸಜ್ಜನ, ಹಸನ್ಮುಖಿ, ಮುತ್ತು ಪ್ರಾಮಾಣಿಕ ಯುವಕರಾಗಿದ್ದರು. ಜಮಾಅತಿನ ಮತ್ತು ಸಂಘಟನೆಯ ಕಾರ್ಯಗಳಿಗಾಗಿ

ಯಾವಾಗಲೂ ಸಿದ್ಧರಿರುತ್ತಿದ್ದರು. ನಿಧನಕ್ಕಿಂತ ಒಂದು ದಿನ ಮೊದಲು ಒಂದು ಜಮಾಅತಿನ ಕಾರ್ಯಕ್ರಮದಲ್ಲಿ ಹಗಲಿರುಳು ಒಂದು ಮಾಡಿ ಸೇವೆ ಸಲ್ಲಿಸಿದ್ದರು. ಮುಂದಿನ ದಿನ ಮತ್ತೆ ಬೆಳಿಗ್ಗೆ ಮಸೀದಿಯಲ್ಲಿ ಫಜರ್ ನಮಾಝ್ ನಂತರ ಖುದ್ದಾಮುಲ್ ಅಹ್ಮದಿಯಾದ ಒಂದು ಸಭೆಯಲ್ಲಿ ಪಾಲ್ಗೊಂಡರು. ಸಭೆಯ ಅಂತಿಮ ಹಂತದಲ್ಲಿ ಮನೆಗೆ ಹೋಗಲು ತನ್ನ ಕಾರಿನ ಬಳಿ ಬರುತ್ತಿದ್ದಂತೆ ಅವರ ಸ್ವಾಸ್ಥ್ಯ ಹದಗೆಡಲು ಪ್ರಾರಂಭಿಸಿತು.

ಮುರಬ್ಬಿ ಸಹಿಬ್ ಅವರನ್ನು ತನ್ನ ಮಿಷನ್ ಹೌಸಿನ ಕಿಟಕಿಯಿಂದ ನೋಡಿದರು. ಅವರು ಅವರ ಸಹಾಯಕ್ಕಾಗಿ ಬಂದರು. ಅಷ್ಟರಲ್ಲೇ ಅವರು ತನ್ನ ಕಾರಿನಲ್ಲಿ ಕುಳಿತುಕೊಂಡಿದ್ದರು. ಆದರೆ ಅವರ ಸ್ವಾಸ್ಥ್ಯ ಇನ್ನಷ್ಟು ಹದಗೆಟ್ಟಿದ್ದಂತೆ ಕಾಣುತ್ತಿತ್ತು. ಡಾಕ್ಟರ್‌ರವರು ಹೇಳುತ್ತಿದ್ದಾರೆ ಅದೇ ಸಮಯ Cª ÀUÉ Heart Attack ಆಗಿತ್ತು. ಮೂರು ನಾಲ್ಕು ನಿಮಿಷದೊಳಗೆ ಅಂಬುಲೆನ್ಸ್ ಸಹ ಬಂದಾಗಿತ್ತು. ಅವರು ಆರೋಗ್ಯ ತಪಾಸಣೆ ಸಹ ಪ್ರಾರಂಭಿಸಿದ್ದರು. ಸುಮಾರು 45 ನಿಮಿಷದವರೆಗೆ ಅವರು ಪ್ರಯತ್ನ ಸಹ ಮಾಡಿದರು. ಆದರೆ ಅಲ್ಲಾಹನ ವಿಧಿ ಜಯಿಸಿತು. ಮತ್ತವರು ತನ್ನ ಇಜವಾದ ಪ್ರಭಾವಿಯೊಡನೆ ಸೇರಿಕೊಂಡರು.

ಶ್ರೀಯುತರು ತನ್ನ ತಂದೆ ತಾಯಿಯವರಿಗೆ ಏಕೈಕ ಪುತ್ರರಾಗಿದ್ದರು. ಅಲ್ಲಾಹನು ಅವರ ತಂದೆ ತಾಯಿಯರಿಗೆ ಸಾಂತ್ವನ ಆಗೂ ಸಹನೆ ದಯಪಾಲಿಸಲಿ. ಮತ್ತು ಮೃತರಿಗೆ ಮಗ್ಫಿರತ್ ಹಾಗೂ ಕರುಣೆ ನೀಡಲಿ. ಅವರ ದರ್ಜೆ ಉನ್ನತೀಕರಿಸಲಿ.

ಮುಂದಿನ ವಿವರ ಚೌಧರಿ ಜಾವೀದ್ ಅಹ್ಮದ್ ಬಿಸ್ಮಿಲ್ ಅವರು ಇತ್ತೀಚೆಗೆ ಕೆನಡಾ ಆಗಮಿಸಿದ್ದರು. ಹಿಂದಿನ ದಿನಗಳಲ್ಲಿ 72ನೇ ವಯಸ್ಸಿನಲ್ಲಿ ಅವರ ನಿಧನವಾಗಿದೆ. **ಇನ್ನಾ ಅಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.** ತುಂಬಾ ದೀರ್ಘ ಕಾಲದವರೆಗೆ ಅಸ್ವಸ್ಥರಾಗಿದ್ದರು. ತಹರೀಕ್ ಜದೀದ್‌ನ ಜಮೀನುಗಳಲ್ಲಿ ಅವರು ದೀರ್ಘ ಸಮಯದವರೆಗೆ ಮ್ಯಾನೇಜರ್ ಆಗಿ ಸೇವೆ ಸಲ್ಲಿಸುವ ಭಾಗ್ಯ ಪಡೆದಿದ್ದರು. ಸುಮಾರು 24, 25 ವರ್ಷ, ಅದಲ್ಲದೇ ಖುದ್ದಾಮುಲ್ ಅಹ್ಮದಿಯಾ ಹಾಘೂ ಇತರ ಜಮಾಅತಿನ ಕಾರ್ಯಗಳಲ್ಲಿ ಸೇವೆ ಸಲ್ಲಿಸುವ ಭಾಗ್ಯ ಪಡೆದಿದ್ದರು. ಅಮೀರ್ ಕೋಟ್ ಜಿಲ್ಲಾ ಅಮಿರರಾಗಿಯೂ ಸೇವೆ ಸಲ್ಲಿಸುವ ಭಾಗ್ಯ ಅವರಿಗೆ ದೊರೆತಿದೆ.

ಅವರ ಪುತ್ರ ತಾಹಿರ್ ಅಹ್ಮದ್ ಸಾಹಿಬ್ ಬರೆಯುತ್ತಾರೆ. ನನ್ನ ತಂದೆ ಬಹಳಷ್ಟು ಸತ್ಕರ್ಮಿಗಳಾಗಿದ್ದರು. ಧರ್ಮ ಸೇವಕರಾಗಿದ್ದರು. ಜನ ಸೇವಕರಾಗಿದ್ದರು. ಖಿಲಾಫತ್‌ನೊಂದಿಗೆ ಅಪ್ರತಿಮ ಪ್ರೀತಿಯಿತ್ತು. ಸದಾ ಖಿಲಾಫತ್‌ನೊಂದಿಗೆ ಒಂದು ವಿಶೇಷ ರೀತಿಯ ಸಂಬಂಧ ಹೊಂದುವ ಪ್ರಯತ್ನದಲ್ಲಿರುತ್ತಿದ್ದರು. ಬಡವರ ಬಗ್ಗೆ ಕಾಳಜಿ ವಹಿಸುತ್ತಿದ್ದರು. ಜಮೀನ್‌ದಾರರಾಗಿದ್ದರು. ಸಿಂಧ್‌ನಲ್ಲಿ ಅವರ ಜಮೀನುಗಳು ಸಹ ಇದ್ದವು. ಇಲ್ಲಿಂದ ಹೋಗುವಾಗಲೆಲ್ಲ ತನ್ನ ಬಡ ಸಂಗಾತಿಗಳಿಂದಾಗಿ ಉಡುಗೊರೆ ಹಾಗೂ ಬಟ್ಟೆ ಇತ್ಯಾದಿ ತೆಗೆದುಕೊಂಡು ಹೋಗುತ್ತಿದ್ದರು. ಅವರ ಮದುವೆಯ ಸಮಂಯು ಕೆಲಸಕ್ಕೆ ಬರಬಹುದೆಂದು. ತುಂಬಾ ಅತಿಥಿ ಸತ್ಕಾರ ಮಾಡುವವರಾಗಿದ್ದರು. ದಿನಾಲೂ ನಮ್ಮ ಮನೆಗೆ ಅತಿಥಿಗಳು ಬರುತ್ತಿದ್ದರು ಮತ್ತು ಅತ್ಯಂತ ಸರಳತನದಿಂದ ಅವರ ಸೇವೆ ಮಾಡುತ್ತಿದ್ದರು. ಅಲ್ಲಾಹನು ಅವರಿಗೆ ತುಂಬಾ ಧೈರ್ಯವನ್ನು ಸಹ ನೀಡಿದ್ದನು ಎಂದು ಸಹ ಜಮಾಅತಿನ ವಿರೋಧಿಗಳು ಮುಮದಾಗುತ್ತಿದ್ದರೆ ಜಮಾಅತಿನ ಹೆಮ್ಮೆ ವ್ಯಕ್ತಪಡಿಸುತ್ತಿದ್ದರು. ಹಲವು ನ್ಯಾಯಾಲಯದ ಮೊಕದ್ದೊಮೆಗಳನ್ನು ತುಮಬಾ ಧೈರ್ಯದಿಂದ ಎದುರಿಸಿದರು. ಆದ ಕಾರಣ ವಿರೋಧಿಗಳು ಅವರ ಮೇಲೆ ಎರಡು ಸಲ ಹಲ್ಲೆ ನಡೆಸಿದ್ದರು. ಆದರೆ ಅಲ್ಲಾಹನು ಅವರಿಗೆ ಸಂರಕ್ಷಿಸಿದನು. ತುಂಬಾ ಶ್ರಮಪಟ್ಟರು, ಸದಾ ಜವಾಅತಿನ ಹಣಕಾಸಿನ ಬಗ್ಗೆ ಗೌರವ ಹೊಮದಿದವರಾಗಿದ್ದರು. ಅಲ್ಲಾಹನ ಮೇಲೆ ಅವರಿಗ ಅಪಾರ ಭರವಸೆಯಿತ್ತು. ಸರಳ ಸ್ವಭಾವದವರಾಗಿದ್ದರು. ಅತ್ಯಂತ ಒಳ್ಳೆಯ ಗುಣವೆಂದರೆ ತಮ್ಮ ಕೊನೆಯ ಅಸ್ವಸ್ಥತೆ ದೀರ್ಘ ಕಾಲದವರೆಗೂ ಮುಂದುವರೆದರೂ ಅವರು ತಾಳ್ಮೆ ಬಿಡಲಿಲ್ಲ ಮತ್ತು ಅಲ್ಲಾಹನ ವಿಧಿಗೆ ಬದ್ಧರಾಗಿದ್ದರು. ನಿಧನಕ್ಕಿಂತ ಒಂದು ದಿನ ಮೊದಲು ಹೇಳುತ್ತಾರೆ. ಅವರ ವೈದ್ಯರು ಹೇಳಿದರು. ನಾನು ಇಂತಹ ಸಹನೆಶಕ್ತಿಯುಳ್ಳವನನ್ನು ನನ್ನ ಜೀವನದಲ್ಲಿ ಎಂದೂ ಕಾಣಲಿಲ್ಲ ಎಂದು. ಯಾವ ರೀತಿಯ ದೂರು ಸಹ ನೀಡಲಿಲ್ಲ. ಡಾ॥ ಇನ್ನು ಚಿಕಿತ್ಸೆ ಸಾಧ್ಯವಿಲ್ಲ ಎಂದು ಹೇಳಿದಾಗ ಅವರು ಈ ಮಾತನ್ನು ಕೇಳಿಯೂ ಸುಮ್ಮನಾದರು. ಅವರ ಪುತ್ರರು ಹೇಳುತ್ತಾರೆ. ಅವರಿಗೆ ತಹಜ್ಜುದ್ ಮತ್ತು ತಸ್ಬೀಹ್ ನಿರ್ವಹಿಸುವುದರಲ್ಲಿ ತುಂಬಾ ಆಸಕ್ತಿಯಿತ್ತು. ಸದಾ ಖಲೀಫರಿಗಾಗಿ ಮೊದಲು ಪ್ರಾರ್ಥಿಸುತ್ತಿದ್ದರು. ನಮಗೂ ದುಆ ಮಾಡಲು ಪ್ರೇರಣೆ ನೀಡುತ್ತಿದ್ದರು. ಅವರು ತುಂಬಾ ವಿಷಯಗರ್ಭಿತರು, ತೀಕ್ಷ್ಣ ಬುದ್ಧಿ ಹೊಂದಿದವರಾಗಿದ್ದರು. ತುಂಬಾ ಕೃತಜ್ಞಭಾವ ಹೊಂದಿದವರಾಗಿದ್ದರು. ಕಷ್ಟಗಳನ್ನು ಸಹ ನಗುಮುಖದಿಂದ ಸಹಿಸಿಕೊಳ್ಳುತ್ತಿದ್ದರು. ಅವರು ತುಂಬಾ ಶುದ್ಧ ಹೃದಯವನ್ನು ಹೊಂದಿದ್ದರು. ಆಗ ಅವರೇ ನಮಗೆ ಉತ್ತಮ ಗುರುಗಳಾಗಿದ್ದರು. ಕರುಣಾಮಯಿ ತಂದೆಯೂ ಆಗಿದ್ದರು. ಎಲ್ಲರ ಬೇಡಿಕೆಗಳನ್ನು ಈಡೇರಿಸುವವರಾಗಿದ್ದರು. ಉತ್ತಮ ಸಲಹೆಗಾರರಾಗಿದ್ದರು. ತುಂಬಾ ಶಕ್ತಿಯುತ ವ್ಯಕ್ತಿತ್ವಯುಳ್ಳವರಾಗಿದ್ದರು. ಲ್ಲಾಹನ ಅನುಗ್ರಹದಿಂದ ಅವರ ಸಂತಾನವು ಸಹ ಜಮಾಅತಿನೊಂದಿಗೆ ಉತ್ತಮ ಸಂಬಂಧ ಹೊಂದಿದವರಾಗಿದ್ದಾರೆ. ನನ್ನೊಡನೆಯು ಅವರ ಹಳೆಯ ಸಂಬಂಧವಿತ್ತು. ಯಾವ ಗುಣಗಳ ಬಗ್ಗೆ ಅವರ ಪುತ್ರ ಬರೆದಿದ್ದಾನೆ, ಇನ್ನಿತರ ಜನರನ್ನು ಸಹ ಅದೇ ಬರೆದಿದ್ದಾರೆ. ನಾನು ಸಹ ನೋಡಿದ್ದೇನೆ. ನಿಜವಾಗಿಯೂ ಅವರಲ್ಲಿ ಆ ಗುಣಗಳಿದ್ದವು. ಅಲ್ಲಾಹನು ಅವರೊಡನೆ ಮಗ್ಫಿರತ್ ಮತ್ತು ಕರುಣೆಯನ್ನು ತೋರಲಿ.

**(ಅಲ್‌ಫಿಝುಲ್ ದಿನಪತ್ರಿಕೆ International 31 ಮಾರ್ಚ್ 2023, ಪುಟ 2–7)**

************

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಬಾಹ್ಯ ಇದನ್ನು ಅವನು ಪ್ರೀತಿಯಿಂದ ಮಾಡುವನು ಖಡ್ಗದಿಂದ ಅಲ್ಲ. ನಾನು ಹುಸೈನ್‌ನ ವಿಧಾನದ ಹಾಗೆ ಯುದ್ಧದ ರೀತಿಯಲ್ಲಿ ಅಲ್ಲ ಬದಲಿಗೆ ನಾನು ಹಸನ್‌ನ ವಿಧಾನದ ಹಾಗೆ ಯುದ್ಧ ಮಾಡದ ರೀತಿಯಲ್ಲಿದ್ದೇನೆ. ಇದು ನನಗೆ ಉಪವಾಸದ ಸಂಕೇತ ಎಂದು ತಿಳಿದು ಬಂತು. ಆದ್ದರಿಂದ ನಾನು ಆರು ತಿಂಗಳು ಸತತವಾಗಿ ಉಪವಾಸಗಳನ್ನು ಅನುಷ್ಠಿಸಿದೆ. ಆ ಕಾಲದಲ್ಲೇ ನಾನು ನೋಡಿದೇನೆಂದರೆ ದಿವ್ಯಪ್ರಕಾಶದ ಕಂಬಗಳು ಆಕಾಶದ ಕಡೆಗೆ ಹಾದುಹೋಗುತ್ತಿದೆ, ಈ ದಿವ್ಯಪ್ರಕಾಶದ ಕಂಬಗಳು ಭೂಮಿಯಿಂದ ಆಕಾಶದ ಕಡೆಗೆ ಹಾದು ಹೋಗುತ್ತಿದೆಯೋ ಅಥವಾ ನನ್ನ ಹೃದಯದಿಂದ ಎಂಬುದನ್ನು ಖಚಿತವಾಗಿರಲಿಲ್ಲ. ಆದರೆ ಇದೆಲ್ಲವೂ ಯೌವನದಲ್ಲಿ ಸಂಭವಿಸಿತ್ತು ಮತ್ತು ಆ ಸಮಯದಲ್ಲಿ ನಾನು ಬಯಸುತ್ತಿದ್ದರೆ ನಾಲ್ಕು ವರ್ಷಗಳ ಕಾಲ ಉಪವಾಸ ಮಾಡಬಹುದಿತ್ತು.

**(ಮಲ್‌ಫೂಝಾತ್, ಸಂಪುಟ–3, ಪುಟ–424, ಪ್ರಕಟಿತ 2018 ಖಾದಿಯನ್)**

*ಕವನ "ಮಹ್‌ಮೂದ್ ಕೀ ಆಮೀನ್"*
(ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್)

ಹಮ್‌ದೋ ಸನಾ ಉಸೀ ಕೋ ಜೋ ಝಾತ್ ಜಾವಿದಾನೀ
ಹಮ್‌ಸರ್ ನಹೀ ಹೇ ಉಸ್‌ಕಾ ಕೋಯೀ ನ ಕೋಯಿ ಸಾನೀ
**ಅರ್ಥ:** ಎಲ್ಲ ಸ್ತುತಿಗಳು ಶಾಶ್ವತವಾದ ಅಸ್ತಿತ್ವವುಳ್ಳವನಿಗೆ ಸಲ್ಲುತ್ತವೆ.
ಅವನಿಗೆ ಸಮಾನರು ಯಾರೂ ಇಲ್ಲ; ಸರಿಸಾಟಿಗಳೂ ಇಲ್ಲ.

ಬಾಖೀ ವಹೀ ಹಮೇಶ ಗೈರ್ ಉಸ್‌ಕೇ ಸಬ್ ಹೈಂ ಫಾನೀ
ಗೈರೋಂ ಸೇ ದಿಲ್ ಲಗಾನ ಝೂಟೀ ಹೇ ಸಬ್ ಕಹಾನೀ
**ಅರ್ಥ:** ಅವನೇ ಸದಾಕಾಲ ನಾಶವಾಗದೆ ಉಳಿಯುವವನು.
ಅವನ ಹೊರತು ಎಲ್ಲರೂ ನಶ್ವರರು.
ಅನ್ಯರೊಂದಿಗೆ ಹೃದಯಬಂಧ ಸ್ಥಾಪಿಸುವುದು
ಸುಳ್ಳು ಕತೆಯ ಹಾಗೆ ನಿರರ್ಥಕ.

ಸಬ್ ಗೈರ್ ಹೈಂ ವಹೀ ಹೇ ಇಕ್ ದಿಲ್ ಕಾ ಯಾರೆ ಜಾನೀ
ದಿಲ್ ಮೇ ಮೆರೆ ಯಹೀ ಹೇ ಸುಬ್‌ಹಾನ ಮೈಯ್ಯರಾನೀ
**ಅರ್ಥ:** ಅವನೊಬ್ಬನೇ ನನ್ನ ಪ್ರಾಣಮಿತ್ರ.
ಉಳಿದವರೆಲ್ಲರೂ ನನಗೆ ಅನ್ಯರು
ನನ್ನ ಹೃದಯದಲ್ಲಿ ಇದು ಮಾತ್ರವಿದೆ.
ನನ್ನನ್ನು ವೀಕ್ಷಿಸುವವನು ಪರಿಶುದ್ಧನು.

ಸಬ್ ಕಾ ವಹೀ ಸಹಾರಾ ರಹ್ಮತ್ ಹೇ ಆಶ್‌ಕಾರಾ
ಹಮ್ ಕೋ ವಹೀ ಪ್ಯಾರಾ ದಿಲ್‌ಬರ್ ವಹೀ ಹಮಾರಾ
**ಅರ್ಥ:** ಎಲ್ಲರಿಗೂ ಅವನೇ ಆಶ್ರಯದಾತನಾಗಿರುವನು –
ಅವನ ಕೃಪೆ ಬಹಿರಂಗವಾಗಿದೆ.
ಅವನು ನಮಗೆ ಅತ್ಯಂತ ಪ್ರಿಯಕರ,
ನಮ್ಮ ಹೃದಯಗಳಲ್ಲಿ ಅವನೇ ಇರುವನು.

ಉಸ್‌ಬಿನ್ ನಹೀ ಗುಝಾರಾ, ಗೈರ್ ಉಸ್‌ಕೇ ಝೂಟ್ ಸಾರಾ
ಯೇ ರೋಝ್ ಕರ್ ಮುಬಾರಕ್ ಸುಬ್‌ಹಾನ ಮಯ್ಯರಾನೀ
**ಅರ್ಥ:** ಅವನ ಹೊರತು ನಾವು ಜೀವಿಸಲಾರೆವು;
ಅವನ ಹೊರತು ಎಲ್ಲವೂ ಮಿಥ್ಯ
ಈ ದಿನವನ್ನು ಅನುಗ್ರಹೀತವನ್ನಾಗಿ ಮಾಡು –
ನನ್ನನ್ನು ವೀಕ್ಷಿಸುವವನು ಪರಿಶುದ್ಧನು.

**ಝಕಾತ್ ಒಂದು ಕಡ್ಡಾಯ ಪ್ರಮುಖ ಕರ್ಮವಾಗಿದೆ. ಅದರ ಪಾಲನೆಯ ಕಡೆ ವಿಶೇಷ ಗಮನವಹಿಸಬೇಕು!**

ಜಮಾಅತ್ ಬಂಧುಗಳು ತಿಳಿದವರೇ ಆಗಿದ್ದಾರೆ. ಪವಿತ್ರ ಖುರ್‌ಆನ್‌ನಲ್ಲಿ ನಮಾಝ್ ನಿರ್ವಹಣೆ ಜೊತೆ ಜೊತೆಯಲ್ಲಿ ಝಕಾತಿನ ನಿರ್ದೇಶನವಿದೆ. ಆದುದರಿಂದ ಎಲ್ಲಾ ಅರ್ಹ ಬಂಧು ಭಗಿನಿಯರಲ್ಲಿ ವಿನಂತಿಸಿ ಕೊಳ್ಳುವುದೇನೆಂದರೆ ಅವರು ಈ ಪ್ರಮುಖ ಕಡ್ಡಾಯ ನಿರ್ವಹಣೆಯತ್ತ ಗಮನ ಹರಿಸಬೇಕಾಗಿದೆ.

ಝಕಾತ್ ಇಸ್ಲಾಮಿನ ಮೂಲಭೂತ ಸಿದ್ಧಾಂತವಾಗಿದೆ. ಅದು ಎಲ್ಲಾ ನಿಗದಿತ ಅರ್ಹ ಜನರಿಗೆ ಕಡ್ಡಾಯವಾಗಿದೆ. ಆ ಪೈಕಿ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಓ ಎಲ್ಲಾ ನನ್ನ ಜಮಾಅತಿಗೆ ಸೇರಿದವರೆಂದು ಹೇಳುವ ಜನರೇ! ನೀವು ಆಕಾಶದಲ್ಲಿ ನಿಜವಾಗಿಯೂ ಭಯಭಕ್ತಿಯ ಮಾರ್ಗಗಳಲ್ಲಿ ನಡೆದವರಾದಾಗ ಮಾತ್ರ ನನ್ನ ಜಮಾಅತಿಗೆ ಸೇರಿದವರಾಗುವಿರಿ. ಆದುದರಿಂದ ತನ್ನ ಐದು ಹೊತ್ತಿನ ನಮಾಝುಗಳನ್ನು ಎಂಥ ಭಯ ಮತ್ತು ಆತ್ಮೀಯವಾಗಿ ನಿರ್ವಹಿಸಬೇಕೆಂದರೆ, ಅಲ್ಲಾಹನು ನಿಮ್ಮನ್ನು ನೋಡುತ್ತಿದ್ದಾನೆ ಎಂದಾಗಿರಬೇಕು. ಅಂತೆಯೇ ತನ್ನ ಉಪವಾಸಗಳನ್ನು ಅಲ್ಲಾಹನಿಗೋಸ್ಕರ ಪೂರ್ಣ ಶ್ರದ್ದೆಯಿಂದ ಪಾಲಿಸುವವರಾಗಿರಿ. ಝಕಾತ್‌ಗೆ ಅರ್ಹರಾದ ಪ್ರತಿಯೊಬ್ಬರು ಝಕಾತ್ ನೀಡಬೇಕು.

**(ಕಿಶ್ತಿ ನೂಹ್, ರೂಹಾನಿ ಖಝಾಇನ್, ಸಂಪುಟ-19, ಪುಟ-15)**

ಆಭರಣಗಳ ಝಕಾತ್ ನೀಡುವಿಕೆ ಕುರಿತು ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ನೀವು ಉಪಯೋಗಿಸುವ ಆಭರಣಗಳು ಮತ್ತು ಒಮ್ಮೊಮ್ಮೆ ಬಡ ಸ್ತ್ರೀಯರಿಗೆ ಉಪಯೋಗಿಸಲು ನೀಡುವ ಆಭರಣಗಳು ಕುರಿತು ಕೆಲವರು ಭಾವಿಸುವುದೇನಂದರೆ ಅದರ ಮೇಲೆ ಝಕಾತ್ ಕಡ್ಡಾಯವಲ್ಲ ಎಂದು. ಮತ್ತು ಯಾವ ಆಭರಣಗಳು ಉಪಯೋಗಿಸಲಾಗುತ್ತದೆಯೋ ಮತ್ತು ಇತರರಿಗೆ ಬಳಸಲು ಕೊಡುವುದಿಲ್ಲವೋ ಆ ಆಭರಣಗಳ ಮೇಲೆ ಝಕಾತ್ ಕೊಡಬೇಕಾಗಿದೆ ಎಂದು. ಏಕೆಂದರೆ ಅದು ತನ್ನ ಸ್ವಂತಕ್ಕಾಗಿ ಬಳಸಲ್ಪಡುತ್ತದೆ. ನಮ್ಮ ಮನೆಗಳಲ್ಲಿ ಅದೇ ತರಹ ಕ್ರಮಬದ್ಧರಾಗಿರುತ್ತಾರೆ. ಮತ್ತು ಪ್ರತಿ ವರ್ಷ ತನ್ನ ಆಭರಣಗಳ ಝಕಾತನ್ನು ನೀಡುತ್ತಾರೆ. ಮತ್ತು ಯಾವ ಆಭರಣಗಳು ರೂಪಾಯಿಗಳಂತೆ ಜಮಾ ಮಾಡಿ ಇಡುತ್ತಾರೋ. ಅದರ ಝಕಾತ್ ಕೊಡುವುದರಲ್ಲಿ ಯಾರಿಗೂ ತಕರಾರು ಇಲ್ಲ.

**(ಅಲ್-ಹಕಮ್ 17 ನವೆಂಬರ್ 1905, ಪುಟ 11)**

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: "ನೆನಪಿಡಬೇಕಾದ ವಿಷಯವೇನೆಂದರೆ ಈ ತೆರಿಗೆಯನ್ನು ನಾವು 'ಝಕಾತ್' ಎನ್ನುತ್ತೇವೆ. ಇದು ಆದಾಯದ ಮೇಲೆ ನಿರ್ಧಾರವಲ್ಲ. ಬದಲು ಬಂಡವಾಳ ಹಾಗೂ ಲಾಭ ಎಲ್ಲವೂ ಸೇರಿಸಿ ನೀಡಲಾಗುತ್ತದೆ. ಅದೇ ರೀತಿ 2.50% ವಾಸ್ತವದಲ್ಲಿ ಕೆಲ ಸಂಧರ್ಭಗಳಲ್ಲಿ ಲಾಭದ 50% ದಷ್ಟಾಗುತ್ತದೆ"

**(ಅಹ್ಮದಿಅತ್ ಯಾನಿ ಹಖೀಖಿ ಇಸ್ಲಾಮ್, ಅನ್ವಾರುಲ್ ಉಲೂಮ್, ಸಂಪುಟ-8, ಪುಟ-306)**

ಆಭರಣಗಳು ಮತ್ತು ನಗದು ರೂಪಾಯಿಯ ಝಕಾತಿಗೆ ನಿರ್ಧರಿತ ಕ್ರಮದ ಕುರಿತು ಸಯ್ಯದ್‌ನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಅಲ್-ಖಾಮಿಸ್(ಅಬಿಅ) ಹೇಳುತ್ತಾರೆ. ಬೆಳ್ಳಿಗೆ ಬೆಳ್ಳಿ ಮತ್ತು ಚಿನ್ನಕ್ಕೆ ಚಿನ್ನವೇ ನಿರ್ಧರಿತ ಕ್ರಮವಾಗಿರುವುದು. ಅದು ರಸೂಲುಲ್ಲಾಹ್(ಸ) ರವರ ಪರಿಶುದ್ಧ ಕಾಲದಲ್ಲಿ ರಸೂಲುಲ್ಲಾಹ್(ಸ) ಸ್ವಯಂ ಜಾರಿಗೆ ತಂದಿದ್ದರು. ಎಲ್ಲಿಯವರೆಗೆ ನಗದು ರೂಪಾಯಿಗಳ ನಿರ್ಧರಿತ ಕ್ರಮದ ಪ್ರಶ್ನೆ ಇದೆಯೋ ಅದನ್ನು ಪ್ರಸಕ್ತ ಸಮಯ ಲೋಕವು ಚಿನ್ನವನ್ನೇ ಬಂಡವಾಳ ಎಂದು ಒಪ್ಪಿಕೊಂಡಿದೆ. ಆದುದರಿಂದ ನಗದು ರೂಪಾಯಿಗಳ ಝಕಾತ್ ಕೂಡ ಚಿನ್ನದ ಮಾನದಂಡದಂತೆಯೇ ಕೊಡಲಾಗುತ್ತದೆ. (ಮಕ್ತೂಬ್ ಹುಝೂರ್(ಅತಬಿಅ) ಬನಾಮ್ ಸದರ್ ಸಾಹಿಬ್ ಮಜ್ಲಿಸ್ ಇಫ್ತಾಹ್)

ರಸೂಲುಲ್ಲಾಹ್(ಸ) ಬೆಳ್ಳಿಗೋಸ್ಕರ 52 ವರೆ ತೊಲ (52.5) ಚಿನ್ನಕ್ಕೋಸ್ಕರ ಏಳುವರೆ ತೊಲ (7.5) ನಿಗದಿಪಡಿಸಲಾಗಿದೆ.

* ಯಾರ ಬಳಿ ಐವತ್ತೆರಡುವರೆ (52.5) ತೊಲ 612 ಗ್ರಾಂ ಬೆಳ್ಳಿ ಇದೆಯೋ ಮತ್ತು ಅದು ಅವರ ಬಳಿ ಒಂದು ವರ್ಷ ಆದರೆ. ಆಗ ಅದರ 1/40 ಭಾಗ ಅಂದರೆ ಎರಡುವರೆ ಪ್ರತಿಶತ ಝಕಾತ್ ನೀಡುವುದು ಕಡ್ಡಾಯವಾಗಿರುತ್ತದೆ.

ಅದೇ ರೀತಿ ಯಾರ ಬಳಿ ಎಳುವರೆ (7.5) ತೊಲ 87 ಗ್ರಾಂ ಚಿನ್ನವಿರುತ್ತದೆ. ಅಥವಾ ಅದಕ್ಕೆ ಸಮನಾದ ನಗದು ಹಣದ ರಾಶಿಯಿರುತ್ತದೆ. ಅದರ ಮೇಲೆ ಒಂದು ವರ್ಷ ಅವಧಿ ಕಳೆದರೆ ಆಗ ಅದರ ಮೇಲೆಯೂ 1/40 ಭಾಗ ಅಂದರೆ ಎರಡುವರೆ ಪ್ರತಿಶತ ಝಕಾತ್ ನೀಡುವುದು ಫರ್ಝ್ (ಕಡ್ಡಾಯ) ಆಗಿರುತ್ತದೆ.

* ಝಕಾತ್ ರೂಪದಲ್ಲಿ ಪಡೆದ ಒಟ್ಟು ಮೊತ್ತ ಕೇಂದ್ರಕ್ಕೆ ರವಾನಿಸುವುದು ಅವಶ್ಯಕವಾಗಿದೆ.

ಅಲ್ಲಾಹನು ನಮಗೆಲ್ಲರಿಗೂ ಈ ಪ್ರಮುಖ ಕರ್ತವ್ಯವನ್ನು ಪಾಲಿಸಲು ಭಾಗ್ಯ ದಯಪಾಲಿಸಲಿ ಮತ್ತು ಜಮಾಅತಿನ ಎಲ್ಲಾ ಬಂಧುಗಳ ಸಂಪತ್ತು ಹಾಗೂ ಆತ್ಮಗಳಲ್ಲಿ ತನ್ನ ಅನುಗ್ರಹ ದಯಪಾಲಿಸಲಿ. **ಆಮೀನ್**

**(ಪತ್ರಿಕಾಂಗ)**

**ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ವಾರಪತ್ರಿಕೆ "ಬದರ್" ಇದೀಗ ಕನ್ನಡದಲ್ಲಿ ಪ್ರಕಟಗೊಳ್ಳುತ್ತಿದೆ.**

ಈ ಪತ್ರಿಕೆಯ ಹೆಸರು **"ಬದರ್"** ಎಂದಾಗಿದೆ. ಪೂರ್ಣ ಚಂದ್ರ ಎಂದರ್ಥ. ಇದು ಜಮಾಅತೆ ಅಹ್ಮದಿಯದ ಒಂದು ಧಾರ್ಮಿಕ ಪತ್ರಿಕೆ ಆಗಿದೆ ಅದರ ಮೂಲ ಉದ್ದೇಶ ಜಮಾಅತ್ತಿನ ಸದಸ್ಯರ ತರಬೇತಿ, ಶಿಕ್ಷಣ, ಒಳ್ಳೆ ನೈತಿಕತೆ ಕಲಿಸುವುದಾಗಿದೆ.

ನಮ್ಮ ಎರಡು ಉದ್ದೇಶಗಳಿವೆ. ಒಂದು ಅಲ್ಲಾಹನ ಹಕ್ಕನ್ನು ನಿಭಾಯಿಸುವುದು ಇನ್ನೊಂದು ದಾಸರ ಹಕ್ಕನ್ನು ನಿಭಾಯಿಸುವುದಾಗಿದೆ.

ಅಲ್ಲಾಹನ ಹಕ್ಕು ಏನಾಗಿದೆ ಎಂದರೆ ಅವನನ್ನು ಆರಾಧಿಸುವುದು ಅವನು ಎಲ್ಲಾ ಸ್ತುತಿ ಸರ್ವ ಲೋಕಗಳ ಪರಿಪಾಲಕನಾಗಿದ್ದಾನೆ ಮತ್ತು ಅವನ ಉಪಕಾರಗಳನ್ನು ನೆನಪಿಸಿಕೊಂಡು ಅವನಿಗೆ ವಿಧೇಯತೆ ತೋರಿಸುವುದಾಗಿದೆ.

ಇನ್ನೊಂದು ದಾಸರ ಹಕ್ಕನ್ನು ನಿಭಾಯಿಸುವುದಾಗಿದೆ. ದಾಸರ ಹಕ್ಕುಗಳೇನಂದರೆ ಅಗತ್ಯವುಳ್ಳವರನ್ನು ಸಹಾಯ ಮಾಡುವುದು, ಯಾರನ್ನು ದುಃಖ, ತೊಂದರೆ ಅಥವಾ ಸಂಕಷ್ಟ ಕೊಡಬಾರದು, ರಾಷ್ಟ್ರದಲ್ಲಿ ಕಿಡಿಗೇಡಿತನ ಹುಟ್ಟಿಸಬಾರದು, ಸ್ವದೇಶ ಪ್ರೇಮ ಈಮಾನಿನ ಒಂದು ಭಾಗವಾಗಿದೆ ಹಾಗೂ ಸ್ವದೇಶದ ಅಭಿವೃದ್ಧಿಗಾಗಿ ಶ್ರಮವಹಿಸುವುದಾಗಿದೆ.

ಈ ಪತ್ರಿಕೆಯು 100 ವರ್ಷಕ್ಕಿಂತ ಹೆಚ್ಚು ಕಾಲಾವಧಿಯಿಂದ ಈ ಉದ್ದೇಶದ ಪ್ರಕಾರ ಜಮಾಅತ್ತಿನ ಸದಸ್ಯರ ಶೈಕ್ಷಣಿಕವಾಗಿ ತರಬೇತಿ ಮಾಡುತ್ತಾ ಬಂದಿದೆ. ಅದರ ಪ್ರತಿ ಫಲವಾಗಿ ನಮಗೆ ಅಲ್ಲಾಹನ ಅನುಗ್ರಹದಿಂದ ಶಾಂತಿಯುತ ಪಂಗಡ ಎಂದು ವಿಶ್ವದಾದ್ಯಂತ ಪರಿಗಣಿಸುತ್ತಾರೆ.

ಅಕ್ಟೋಬರ್ 1902ರಲ್ಲಿ ಜಾಗತಿಕ ಅಹ್ಮದಿಯ ಮಯಸ್ಲಿಮ್ ಜಮಾಅತ್ತಿನ ಸಂಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಖದಿಯಾನಿ(ಅಲೈಹಿಸ್ಸಲಾಮ್) ಅವರು ಈ ಪತರಿಕೆಯನ್ನು ಉರ್ದು ಭಾಷೆಯಲ್ಲಿ ಉದ್ಘಾಟಿಸಿದರು. ಇಂದು ಈ ಪತ್ರಿಕೆಯು ಭಾರತದ ಏಳು ಭಾಷೆಗಳಲ್ಲಿ ಭಾಷಾಂತರವಾಗಿ ಪ್ರಕಟಗೊಳ್ಳುತ್ತಿದೆ. ಉರ್ದುವನ್ನು ಬಿಟ್ಟು ಹಿಂದಿ, ತಮಿಳು, ತೆಲುಗು, ಬಾಂಗ್ಲ, ಒಡಿಯಾ, ಮಳಯಾಳಂ ಹಾಗೂ ಕನ್ನಡ. ಕಳೆದ 2.5 ವರ್ಷದಿಂದ ಕನ್ನಡದಲ್ಲಿಯು ಈ ಪತ್ರಿಕೆಯು ಪ್ರಕಟಗೊಳ್ಳುತ್ತಿರುವುದು ಬಹಳ ಸಂತೋಷದ ವಿಷಯವಾಗಿದೆ. ಈ ಪತ್ರಿಕೆಯು ಧಾರ್ಮಿಕ ಪತ್ರಿಕೆ ಆದ್ದರಿಂದ ರಾಜಕೀಯ ನಿಟ್ಟಿನಲ್ಲಿ ಯಾವ ಸಂಬಂಧವೂ ಇಲ್ಲ.

ಈ ಪತ್ರಿಕೆಯಲ್ಲಿ ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ಪಂಚಮ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್‌ರವರ ಶುಕ್ರವಾರದ ಪ್ರವಚನ (ಖುತ್‌ಬ ಜುಮುಅ) ವಿಶೇಷವಾಗಿರುತ್ತದೆ. ಆ ಖುತ್‌ಬದಲ್ಲಿ ಅವರು ಪವಿತ್ರ ಖುರ್‌ಆನ್ ಹಾಗೂ ಹದೀಸ್‌ಗಳ ಶಿಕ್ಷಣಗಳ ಪ್ರಕಾರ ತಮ್ಮ ಜಮಾಅತ್ತಿನ ಸದಸ್ಯರನ್ನು ಸಂಬೋಧಿಸುತ್ತಾರೆ. ನಿಮ್ಮ ಈ ಪ್ರವಚನವೂ ಎಂ.ಟಿ.ಎ ಎಂಬ ಚ್ಯಾನಲ್‌ನಲ್ಲಿ ಪ್ರತಿ ಶುಕ್ರವಾರ ನೇರವಾಗಿ ಪ್ರಸಾರವಾಗುತ್ತದೆ. ಅದನ್ನು ಇಡೀ ವಿಶ್ವದಾದ್ಯಂತ ಕೆಳ ಹಾಗೂ ನೋಡಬಹುದು. ತದನಂತರ ಈ ಖುತ್‌ಬ ಪತ್ರಿಕೆಯಲ್ಲಿ ಪಕಟಗೊಳ್ಳುತ್ತದೆ. ಖಲೀಫರ ಖುತ್‌ಬ ಈ ಪತ್ರಿಕೆಯ ಪ್ರಾಣವಾಗಿದೆ.

ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ವಾಗ್ದಾತ್ತ ಮಹೀಹರ 5ನೇ ಖಲೀಫರಾಗಿದ್ದಾರೆ ಅವರು ಲಂಡನ್‌ನಲ್ಲಿ ವಾಸವಾಗಿದ್ದಾರೆ. ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ಇಮಾಮರಾಗಿದ್ದಾರೆ. ಅದಲ್ಲದೆ ಈ ಪತ್ರಿಕೆಯಲ್ಲಿ ಖಲೀಫರ ಪ್ರವಾಸಗಳ ವರದಿಗಳು ಪ್ರಕಟಗೊಳ್ಳುತ್ತದೆ ಅವೂ ಬಹಳ ಕುತೂಹಲಕಾರಿ ಆಗಿರುತ್ತದೆ. ಈ ವರದಿಗಳು ಜಮಾಅತ್ತಿನ ಸದಸ್ಯರ ಜ್ಞಾನ ಅಭಿವೃದ್ಧಿಯಲ್ಲಿ ವಿಶೇಷವಾಗಿ ಕಾರ್ಯ ನಿರ್ವಹಿಸುತ್ತದೆ. ಇದಲ್ಲದೆ ಜಮಾಅತ್ತಿನ ಕಾರ್ಯಗಳ ವರದಿಗಳು ಮತ್ತು ಆಧ್ಯಾತ್ಮಿಕ ಹಾಗೂ ಶೈಕ್ಷಣಿಕ ಅಭಿಮೃದ್ಧಿಸುವಂತಹ ಜ್ಞಾನ ಭರಿತ ಲೇಖನಗಳು ಪ್ರಕಟಗೊಳ್ಳುತ್ತದೆ.

ಹೀಗಾಗಿ ಈ ಪತ್ರಿಕೆಯು ಮಹತ್ವಪೂರ್ಣವಾದ ಪತ್ರಿಕೆ ಆಗಿದೆ.

ಎಲ್ಲಾ ಓದುಗರಲ್ಲಿ ಈ ಪತ್ರಿಕೆಯನ್ನು ಕೊಂಡುಕೊಳ್ಳಬೇಕಾಗಿ ವಿನಂತಿಸಲಾಗುತ್ತಿದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: +91 99153 79255, 9902678609, 9866358609 (ವ್ಯವಸ್ಥಾಪಕರು)

**ಇನ್ಸಾನಿಯತ್ ಝಿಂದಾಬಾದ್**
**ಮಾನವೀಯತೆ ಚಿರಕಾಲ ಬಾಳಲಿ**

## ಸದಖತುಲ್ ಫಿತರ್

ಅಲ್‌ಹಮ್‌ದುಲಿಲ್ಲಾಹ್! ಪವಿತ್ರ ರಮಝಾನ್ ಇದೇ ಏಪ್ರಿಲ್ ತಿಂಗಳಿನ ಅಂತಿಮ ವಾರದಲ್ಲಿ ಪ್ರಾರಂಭವಾಗಲಿದೆ. ಇಸ್ಲಾಮಿನಲ್ಲಿ **"ಫಿತ್ರಾನ"** ಕೊಡಲು ಒಂದು ಸಾಅ್ (ಅಂದರೆ ಸುಮಾರು 2 ಕೆಜಿ 750 ಗ್ರಾಂ ಸಮಾನ) ನಿಗದಿ ಪಡಿಸಲಾಗಿರುತ್ತದೆ. ಜಮಾಅತ್ ಬಾಂಧವರು ನಿಗದಿತ ದರ ಪ್ರಕಾರ ಪವಿತ್ರ ರಂಝಾನಿನ ಪ್ರಥಮ ಅಥವಾ ದ್ವಿತೀಯ ದಶಕದೊಳಗೆ **"ಸದಖತುಲ್ ಫಿತರ್"** ಪಾವತಿಸಲು ಪ್ರಯತ್ನ ಪಡಬೇಕಾಗಿದೆ. ಏಕೆಂದರೆ ಭಾರತದ ರಾಜ್ಯಗಳ ಧಾನ್ಯ (ಗೋದಿ, ಅಕ್ಕಿ) ಯ ನಿಗದಿತ ದರ ಮೌಲ್ಯ ವಿಭಿನ್ನ ರೀತಿಯದ್ದಾಗಿರುತ್ತದೆ. ಆದುದರಿಂದ ಸ್ಥಳಿಯ ನಿಗದಿತ ಮೌಲ್ಯ ದರದಂತೆ ನಿಗದಿಪಡಿಸಿದ ಪ್ರಕಾರ ಫಿತ್ರಾನ ಮೊತ್ತವನ್ನು ನೀಡಬೇಕು.

ಪಂಜಾಬಿನಲ್ಲಿ ಈ ವರ್ಷ ಸದಖತುಲ್ ಫಿತರ್ ಒಬ್ಬರಿಗೆ 58/- ರೂಪಾಯಿಗಳನ್ನು ನಿಗದಿಪಡಿಸಲಾಗಿದೆ. ಸ್ಥಳಿಯ ಜಮಾಅತ್ತಿನಲ್ಲಿ ಅರ್ಹ ಬಡವಿದ್ದರಲ್ಲಿ ಸದಖತುಲ್ ಫಿತರ್‌ನ ಒಟ್ಟು ಮೊತ್ತದಲ್ಲಿ ಶೇ. 90ರ ವರೆಗೆ ಹಣವನ್ನು ಮಜ್ಲಿಸ್ ಆಮಿಲಾದ ನಿರ್ಣಯದ ಪ್ರಕಾರ ಹಂಚಬಹುದಾಗಿದೆ. ಉಳಿದ ಹಣ ಕೇಂದ್ರಕ್ಕೆ ಜಮಾ ಮಾಡಲು ಕಳುಹಿಸಬೇಕು. ಯಾವ ಜಮಾಅತ್ತಿನಲ್ಲಿ ಅರ್ಹ ಬಡವರು ಇರುವುದಿಲ್ಲವೋ ಅವರು ಜಮಾಅತ್ತಿನಲ್ಲಿ ವಸೂಲಾದ ಸಂಪೂರ್ಣ ಹಣವನ್ನು 'ಸದರ್ ಅಂಜುಮನ್ ಅಹ್ಮದಿಯಾ' ಖಾತೆಯಲ್ಲಿ ಕಳುಹಿಸತಕ್ಕದ್ದು. ನೆನಪಿರಲೀ! ಫಿತ್ರಾನದ ಹಣವನ್ನು ಮಸೀದಿಯ ಯಾವುದೇ ಅಗತ್ಯ ಕಾರ್ಯಗಳಿಗೆ ಉಪಯೋಗಿಸಿಕೊಳ್ಳಲು ಅನುಮತಿ ಇರುವುದಿಲ್ಲ.

### ಈದ್ ಫಂಡ್

ಈ ಚಂದ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಕಾಲದಿಂದ ಖಾಯಮ್ ಆಗಿರುತ್ತದೆ. ಈ ಫಂಡಿನ ಉದ್ದೇಶವೇನಾಗಿತ್ತೆಂದರೆ ಸಂತೋಷದ ಸಮಯಗಳಲ್ಲಿ ಮನುಷ್ಯ ತನ್ನ ಸ್ವಯಂ ಸಂತೃಪ್ತಿಗಾಗಿ, ಬಟ್ಟೆಗಳಿಗಾಗಿ, ಊಟೋಪಚಾರ, ಅತಿಥಿ ಸತ್ಕಾರ ಇತ್ಯಾದಿ ಹಲವು ವಿಧಗಳ ವೆಚ್ಚ ಮಾಡುತ್ತಾನೆ. ಇತರರಿಗೂ ಉಡುಗೋರೆ ಇತ್ಯಾದಿಗಳನ್ನು ನೀಡುತ್ತಾನೆ ಅದೇ ರೀತಿ ಈ ಸುಸಂದರ್ಭದಲ್ಲಿ ಧರ್ಮ ಕಾರ್ಯಗಳ ಬಗ್ಗೆಯು ಗಮನವಿರಬೇಕು. ಅಹ್ಮದಿ ಸದಸ್ಯರು ಬೈಅತ್ ಮಾಡುವಾಗಲೇ ಈ ಕರಾರು ಒಪ್ಪಿರುತ್ತಾರೆ. ಧರ್ಮವನ್ನು ಲೋಕದ ಕಾರ್ಯಗಳ ಮೇಲೆ ಆಧ್ಯತೆ ನೀಡುವೆನು ಎಂದು. ಆದುದರಿಂದ ಪ್ರತಿ ಅಹ್ಮದಿಯರಿಂದ ನರೀಕ್ಷಿಸಲಾಗಿರುವುದು ಏನೆಂದರೆ ಅವರು ಸಂತೋಷ ಸಂಭ್ರಮದ ಹಬ್ಬಗಳಲ್ಲಿ ಧರ್ಮಕಾರ್ಯಗಳ ಬಗ್ಗೆಯು ಲಕ್ಷ್ಯವಹಿಸುವರು. ಈ ಉದ್ದೇಶಕ್ಕಾಗಿ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ತಮ್ಮ ಕಾಲದಲ್ಲಿ ಈ ಖಾತೆಗೆ ಪ್ರತಿಯೊಬ್ಬ ಆದಾಯವುಳ್ಳ ಅಹ್ಮದಿ ಒಬ್ಬರಿಗೆ ಒಂದು ರೂಪಾಯಿಯಂತೆ "ಈದ್ ಫಂಡ್: ಕೊಡಬೇಕು. ಇಂದು ಒಂದು ರೂಪಾಯಿಯ ಬೆಲೆ ಏನು ಉಳಿಯಲಿಲ್ಲ, ಆದುದರಿಂದ ಒಂದು ರೂಪಾಯಿಗೆ ಸೀಮಿತ ಪಡಿಸದೆ ನಮ್ಮ ಸಾಮರ್ಥ್ಯನುಸಾರವಾಗಿ ಕೊಡಬಹುದಾಗಿದೆ. ಒಂದು ಸಲಹೆ ಏನೆಂದರೆ ಹಬ್ಬದ ದಿವಸ ಸಾಮಾನ್ಯವಾಗಿ ಮಾಡಬಹುದಾದ ಖರ್ಚುವೆಚ್ಚದ ಅರ್ಧ ಭಾಗವನ್ನು ಈ ಖಾತೆಯಲ್ಲಿ ನೀಡಬಹುದಾಗಿದೆ. ಇದು ಕೇಂದ್ರೀಯ ಚಂದವಾಗಿರುತ್ತದೆ. ವಸೂಲಾದ ಸಂಪೂರ್ಣ ಮೊತ್ತವನ್ನು ಸದರ್ ಅಂಜುಮನ್ ಅಹ್ಮದಿಯಾ ಖಜಾನೆಯಲ್ಲಿ ಜಮಾ ಮಾಡುವುದು ಅನಿವಾರ್ಯವಾಗಿರುತ್ತದೆ. ಇದರಿಂದ ಸ್ಥಳಿಯರಿಗೆ ಯಾವುದೇ ರೀತಿಯ ಖರ್ಚು ಮಾಡಲು ಅನುಮತಿ ಇರುವುದಿಲ್ಲ.

**(ನಾಝಿರ್ ಬೈತುಲ್ ಮಾಲ್ ಅಮದ್ ಖಾದಿಯಾನ್)**

## ಹಝ್‌ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್

**ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:**

"ಎಲ್ಲ ಪ್ರವಾದಿಗಳಲ್ಲಿ ಅತ್ಯಂತ ಪರಿಪೂರ್ಣ ಉಪದೇಶಗಳನ್ನು ನೀಡಿದವರು, ಅತ್ಯುನ್ನತ ಮಟ್ಟದ ಪರಿಶುದ್ಧತೆ ಹಾಗು ಜಾಣ್ಮೆಯಿಂದ ಕೂಡಿದ ಉಪದೇಶ ನೀಡಿದವರು ಮತ್ತು ಅತ್ಯುತ್ತಮ ಮಾನವೀಯ ಗುಣಗಳನ್ನು ತನ್ನ ಜೀವಿತದಲ್ಲಿ ಅಳವಡಿಸಿ ಲೋಕಕ್ಕೆ ಅತ್ಯುತ್ತಮ ಮಾದರಿಯಾಗಿ ತೋರಿಸಿಕೊಟ್ಟವರು ನಮ್ಮ ನಾಯಕರೂ ನಮ್ಮ ಮಾಲಿಕರೂ ಆದ ಹಝ್‌ರತ್ ಮುಹಮ್ಮದ್(ಸ) ಆಗಿರುವರು ಎಂದು ನನಗೆ ಮನವರಿಕೆ ಮಾಡಿಕೊಡಲಾಗಿದೆ." ***(ಅರ್‌ಬಈನ್ ನಂಪುಟ-1 ರೂಹಾನಿ ಖಝಾಇನ್ ಸಂಪುಟ 17, ಪುಟ 345)***

## ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ರಕ್ಷಿಸಿರಿ

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಾಲದ ಸ್ಮರಣೀಯ ಪತ್ರಿಕೆ. **"ಅಖ್ಬಾರ್ ಬದರ್"** 1952 ರಿಂದ ಸತತವಾಗಿ ಖಾದಿಯಾನ್ ದಾರುಲ್‌ಅಮಾನಿನಿಂದ ಪ್ರಕಟಗೊಳ್ಳುತ್ತಿದೆ ಮತ್ತು ಅಹ್ಮದೀಯರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇದರಲ್ಲಿ ಪವಿತ್ರ ಖುರ್‌ಆನಿನ ಆಯತ್‌ಗಳು, ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಹದೀಸ್‌ಗಳು, ಹಝ್ರತ್ ಮಸೀಹ್ ಮೌಊದ್(ಅ)ರ ಮಲ್‌ಫೂಝಾತ್ ಮತ್ತು ಬರವಣಿಗೆಳಲ್ಲದೆ ಹುಝೂರ್ ಅನ್ವರ್(ಅತಬಿಅ)ರವರ ಹೊಸ ಖುತ್‌ಬ ಜುಮುಅ, ಉಪನ್ಯಾಸಗಳು, ಸಂದೇಶಗಳು, ಖುತ್‌ಬ ಜುಮುಅ ಪ್ರಶ್ನೋತ್ತರದ ರೂಪದಲ್ಲಿ ಮತ್ತು ಹುಝೂರ್ ಅನ್ವರ್‌ರವರ ಪ್ರವಾಸದ ವರದಿಗಳು, ಅದೇ ರೀತಿ ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನಗಳ ಸಂಪತ್‌ಭರಿತ ವರದಿಗಳು ಇರುತ್ತದೆ. ಅವುಗಳನ್ನು ಅಧ್ಯಯನ ಮಾಡುವುದು, ಅವುಗಳನ್ನು ಅನ್ಯರಿಗೆ ತಲುಪಿಸುವುದು ಮತ್ತು ಅದರಿಂದ ತಮ್ಮ ಮತ್ತು ತಮ್ಮ ಮಕ್ಕಳ, ಕುಟುಂಬದವರ ತರಬೇತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ಎಲ್ಲಾ ಉದ್ದೇಶಗಳನ್ನು ಪಡೆಯುವುದಕ್ಕೆ ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆಧ್ಯಾತ್ಮಿಕ ಜ್ಞಾನ ಮತ್ತು ತರಬೇತಿಯನ್ನೂ ಒಳಗೊಂಡಿರುವ ಈ ಪವಿತ್ರವಾದ ಪತ್ರಿಕೆಯ ಅವಶ್ಯಕತೆ ಏನೆಂದರೆ ಅದನ್ನು ಗೌರವಿಸಬೇಕು. ಆದ್ದರಿಂದ ಇದನ್ನು ರದ್ದಿಗೆ ಹಾಕುವುದು ಅದರ ಪಾವಿತ್ರ್ಯತೆಯನ್ನು ಚದುರಿಸುವ ಸಮಾನವಾಗಿದೆ. ಅದನ್ನು ರಕ್ಷಿಸಲು ಕಷ್ಟವಾಗುತ್ತಿದ್ದರೆ ಅದನ್ನು ಎಚ್ಚರಿಕೆಯಿಂದ ನಾಶಮಾಡಿರಿ. ಏಕೆಂದರೆ ಹೀಗೆ ಆ ಪವಿತ್ರ ಬರಹಗಳು ಅವಮಾನವಾಗಬಾರದು. ಅಹ್ಮದಿ ಸದಸ್ಯರೆಲ್ಲರೂ ಈ ಬಗ್ಗೆ ವಿಶೇಷ ಗಮನ ಹರಿಸುತ್ತೀರ ಮತ್ತು ಇದರಿಂದ ಉಪಯೋಗ ಗಳಿಸುವಿರೀ ಎಂದು ಆಶಿಸುತ್ತೇವೆ. **(ಸಂಪಾದಕರು)**

## ದಿವ್ಯದೂತರು (ಮಲಾಯಿಕ)

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: "ಒಬ್ಬ ಮಹತ್ವಶಾಲಿ ವ್ಯಕ್ತಿ ದೇವನ ಪ್ರಾತಿನಿಧ್ಯದ ಉಡುಗೆಯಿಂದ ಭೂಷಿತರಾಗಿ (ದೇವನ ಖಲೀಫರಾಗಿ) ಮತ್ತು ದೇವವಾಣಿಯಿಂದ ಅನುಗ್ರಹೀತರಾಗಿ ಭೂಮಿಗೆ ಇಳಿಯುವಾಗ ದಿವ್ಯದೂತರ ಮತ್ತು ಪವಿತ್ರಾತ್ಮದ ಅವತರಣ ಅಥವಾ ಭೂಮಿಗೆ ಇಳಿಯುವಿಕೆ ಉಂಟಾಗುತ್ತದೆ.ಪವಿತ್ರಾತ್ಮ ವಿಶಿಷ್ಟವಾಗಿ ದೇವನ ಪ್ರತಿನಿಧಿಗೆ ಲಭಿಸುತ್ತದೆ."

***(ಫತ್‌ಹೆ ಇಸ್ಲಾಮ್; ರೂಹಾನೀ ಖಝಾಇನ್ ಸಂಪುಟ 3, ಪುಟ 12)***

## ರಮಝಾನುಲ್ ಮುಬಾರಕ್ ಮತ್ತು ವಕ್ಫ್ ಎ ಜದೀದ್

ಅಲ್‌ಹಮ್ದುಲಿಲ್ಲಾಹ್! ರಮಝಾನುಲ್ ಮುಬಾರಕ್‌ನ ಅನುಗ್ರಹದಾಯಕ ಪವಿತ್ರ ಮಾಸವು ಪ್ರಾರಂಭವಾಗಿದೆ ಹಝ್‌ರತ್ ಖಲೀಫತುಲ್ ಮಾಸಿಹ್ ರಾಬಿ(ರ) ಹೇಳುತ್ತಾರೆ:

ಈಗ ರಮಝಾನ್‌ನ ಪವಿತ್ರ ಮಾಸವಾಗಿದೆ ಮತ್ತು ಈ ಲೇಖನವನ್ನು ನಾನು ಮೂಲತಃ ವಕ್ಫ್ ಎ ಜದೀದ್‌ಗಾಗಿ ಪ್ರಾರಂಭಿಸಿದ್ದು ಇದನ್ನು ನಾನು ರಮಝಾನ್‌ನೊಂದಿಗೆ ಸಂಯೋಜಿಸಲು ಬಯಸುತ್ತೇನೆ ಆದ್ದರಿಂದ ರಮಝಾನ್‌ನ ಅನುಗ್ರಹಗಳಲ್ಲಿ ವಕ್ಫ್ ಎ ಜದೀದ್ ಹಾಗೂ ವಕ್ಫ್ ಎ ಜದೀದ್‌ನ ಅನುಗ್ರಹಗಳಲ್ಲಿ ರಮಝಾನ್‌ನ ಅನುಗ್ರಹವು ಒಳಗೊಳ್ಳಲಿ. (ಖುತ್ಬ ಜುಮುಅ, ಜನವರಿ 2, 1998)

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

ನೀವು ಇಸ್ಲಾಂ ಧರ್ಮವನ್ನು ಬೆಂಬಲಿಸಲು ನಿಮ್ಮ ಉದಾರತೆಯ ಹಸ್ತವನ್ನು ತೆರೆದರೆ, ತಕ್ಷಣವೇ ಪ್ರಕೃತಿಯ ಕೈ ನಿಮಗೆ ಕಾಣಿಸಿಕೊಳ್ಳುತ್ತದೆ. ಹೀಗೆ ಖರ್ಚು ಮಾಡುವುದರಿಂದ ಯಾರೂ ಸಹ ಬಡವನಾಗುವುದಿಲ್ಲ. ಧೈರ್ಯ ಮಾಡಿದರೆ, ಅಲ್ಲಾಹನೇ ಸಹಾಯಕನಾಗುತ್ತಾನೆ."

(ಮಜ್‌ಮೂಅ ಇಶ್ತಿಹಾರಾತ್, ಸಂಪುಟ-2, ಪುಟ-613)

ಹೀಗಾಗಿ ಜಮಾಅತ್ತಿನ ಎಲ್ಲಾ ಸದಸ್ಯರು ಈ ರಮಝಾನ್‌ನ ಅನುಗ್ರಹದಾಯಕ ದಿನಗಳಲ್ಲಿ ವಾಗ್ದಾನ ನೀಡಿದಂತೆ ಪೂರ್ಣ ಮೊತ್ತವನ್ನು ಪಾವತಿಸಲು ವಿನಂತಿಸಲಾಗಿದೆ. ಅಲ್ಲಾಹನು ಇದನ್ನು ಪಾವತಿಸಲು ನಮ್ಮೆಲ್ಲರಿಗೂ ಅನುಗ್ರಹಿಸಲಿ ಮತ್ತು ಅಲ್ಲಾಹನು ಎಲ್ಲಾ ಜಮಾಅತ್ತಿನ ಸದಸ್ಯರಿಗೆ ಅಸಾಮಾನ್ಯ ಅನುಗ್ರಹಗಳನ್ನು ನೀಡಲಿ. ಆಮೀನ್.

**(ನಾಝಿಮ್ ಮಾಲ್ ವಕ್ಫ್ ಎ ಜದೀದ್ ಭಾರತ್)**

*(ಪುಟ ಸಂಖ್ಯೆ 12ರ ಉಳಿದ ಭಾಗ)*

ಜಾರ್ಜಿಯ ಜಮಾಅತಿನಿಂದ ಬಂದ ಮಹಿಳೆಯರು 748 ಮೈಲು ಮತ್ತು ಮಿಯಾಮಿಯಿಂದ ಬಂದ 1408 ಮೈಲು ಮತ್ತು ಸಯಾಬಿಲ್‌ನಿಂದ ಬಂದ ಮಹಿಳೆಯರು 2014 ಮೈಲು ದೂರವನ್ನು ಕ್ರಮಿಸಿ ಭೇಟಿ ಮಾಡಲು ಇಲ್ಲಿ ತಲುಪಿದ್ದರು.

ಅಲ್ಲದೇ ಲಾಸ್ ಏಂಜಲಿಸ್‌ನಿಂದ ಬಂದವರು 2046 ಮತ್ತು ಪೋರ್ಟ್‌ಲ್ಯಾಂಡ್‌ನಿಂದ ಬಂದ ಮಹಿಳೆಯರು 2087 ಮೈಲಿನಷ್ಟು ದೂರದ ಪ್ರಯಾಣ ಬೆಳೆಸಿ ತಮ್ಮ ಪ್ರೀತಿಯ ಇಮಾಮರೊಂದಿಗೆ ಭೇಟಿ ಮಾಡಲು ಇಲ್ಲಿ ತಲುಪಿದ್ದರು. ಹುಝೂರ್ ಅನ್ವರ್ ಆ ಮಹಿಳೆಯರಿಂದ ಅವರ ಪರಿಚಯ ಮತ್ತು ಅವರ ಶಿಕ್ಷಣ ಮತ್ತು ಅವರ ಕ್ಯಾಮರಾ ಬಗ್ಗೆ ವಿಚಾರಿಸಿದರು. ವಿದ್ಯಾರ್ಥಿನಿಯರಿಗೆ ಹುಝೂರ್ ಅನ್ವರ್(ಅತಬಿಅ) ಅನ್ವರ್ ಪ್ರೀತಿಪೂರ್ವಕವಾಗಿ ಅವರಿಗೆ ಪೆನ್ ನೀಡಿದರು. ಮತ್ತು ಸಣ್ಣ ವಯಸ್ಸಿನ ಬಾಲಕಿಯರಿಗೆ ಚಾಕ್ಲೇಟ್ ನೀಡಿದರು.

ಕೆಲ ಮಹಿಳೆಯರು ಆಶೀರ್ವಾದ ರೂಪದಲ್ಲಿ "ಅಲೈಸಲ್ಲಾಹು ಬಿಕಾಫಿನ್ ಅಬ್ದಹು" ಉಂಗುರವನ್ನು ನೀಡಲು ಹೇಳೀಇದಾಗ ಹುಝೂರ್ ಅನ್ವರ್(ಅತಬಿಅ) ಅದನ್ನು ನೆರವೇರಿಸಿದರು. ಕೆಲ ಮಹಿಳೆಯರು ತಮ್ಮ ಇಮಾಮರ ಜೊತೆ ಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು ಲಜ್ನದೊಂದಿಗಿನ ಈ ಭೇಟಿ ಏಳೂವರೆ ಗಂಟೆಯವರೆಗೆ ನಡೆಯಿತು. ಅನಂತರ ಹುಝೂರ್ ಅನ್ವರ್(ಅತಬಿಅ) ಅನ್ವರ್ ಕೆಲ ಸಮಯಕ್ಕಾಗಿ ವಸತಿಗೆ ತೆರಳಿದರು.

8 ಗಂಟೆಗೆ ಹುಝೂರ್ ಅನ್ವರ್(ಅತಬಿಅ) (ಅಬಿಅ) ಮಸ್ಜಿದ್ ಫತಹ ಅಝೀಮ್‌ಗೆ ಆಗಮಿಸಿ ಮಗ್ರಿಬ್ ಇಶಾ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ಹುಝೂರ್ ಅನ್ವರ್(ಅತಬಿಅ) ತಮ್ಮ ವಸತಿಯತ್ತ ತೆರಳಿದರು.

**(ಮುಂದುವರಿಯುವುದು)**

**ವಾಖಿಫೀನೆ ಝಿಂದಗಿ ಹಾಗೂ ಧರ್ಮೋಪದೇಶ ಮತ್ತು ತರಬೇತಿಯ ಕರ್ತವ್ಯವನ್ನು ನಿರ್ವಹಿಸಬಲ್ಲ ಧಾರ್ಮಿಕ ಜ್ಞಾನವನ್ನು ಹೊಂದಿರುವವರ ಅಗತ್ಯವು ಹೆಚ್ಚುತ್ತಿದೆ. ಆದ್ದರಿಂದ, ಈ ಕೆಲಸವನ್ನು ವಿಶೇಷವಾಗಿ ಮಾಡುವ ಒಂದು ಗುಂಪು ಇರಬೇಕು.**

**ನಿಮ್ಮ ಮಕ್ಕಳನ್ನು ಜಾಮಿಯ ಅಹ್ಮದೀಯಾದಲ್ಲಿ ಶಿಕ್ಷಣವನ್ನು ಪಡೆಯಲು ಅರ್ಪಿಸಿ**

ಹಝ್‌ರತ್ ಅಮೀರ್-ಉಲ್-ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರು ನುಡಿಯುತ್ತಾರೆ:

ಜಮಾಅತ್ತಿನ ಅಗತ್ಯಗಳು ಹೆಚ್ಚಾದಂತೆ ತಬ್ಲೀಗಿನ ಕ್ಷೇತ್ರ ಮತ್ತು ಇತರ ಸೇವಾ ಕ್ಷೇತ್ರಗಳಲ್ಲಿ ವಾಖಿಫೀನೆ ಝಿಂದಗಿಯರ ಮತ್ತು ಮುಬಲ್ಲಿಗೀನರ (ಪ್ರಚಾರಕರು) ಅಗತ್ಯವಿದೆ. ಈ ವಿಸ್ತರಣೆಯಾಗುತ್ತಿದ್ದಂತೆ ಕೆಲಸವು ಸಹ ಹೆಚ್ಚುತ್ತಿದೆ, ಅಹ್ಮದಿಯತ್‌ನ ಸಂದೇಶ ಹರಡುತ್ತಿದೆ. ಜಗತ್ತು ಕೂಡ ಅಹ್ಮದಿಯತ್ ಅನ್ನು ಸ್ವೀಕರಿಸುತ್ತಾ ಇದೆ. ಇದರೊಂದಿಗೆ, ವಾಖಿಫೀನೆ ಝಿಂದಗಿ ಹಾಗೂ ಧರ್ಮೋಪದೇಶ ಮತ್ತು ತರಬೇತಿಯ ಕರ್ತವ್ಯವನ್ನು ನಿರ್ವಹಿಸಬಲ್ಲ ಧಾರ್ಮಿಕ ಜ್ಞಾನವನ್ನು ಹೊಂದಿರುವವರ ಅಗತ್ಯವು ಹೆಚ್ಚುತ್ತಿದೆ......... ಜಮಾಅತ್ತಿನ ಪ್ರತಿಯೊಬ್ಬ ವ್ಯಕ್ತಿಯು ಯಾವಾಗಲೂ ತಬ್ಲೀಗ್‌ನಲ್ಲಿ ಅಥವಾ ತರಬೇತಿ ನೀಡುವುದರಲ್ಲಿ ನಿರತರಾಗಿರುಲು ಸಾಧ್ಯವಿಲ್ಲ ಆದ್ದರಿಂದ, ಈ ಕೆಲಸವನ್ನು ವಿಶೇಷವಾಗಿ ಮಾಡುವ ಒಂದು ಗುಂಪು ಇರಬೇಕು ಎಂದು ಅಲ್ಲಾಹನು ಹೇಳಿರುವನು. ಇನ್ನೊಂದು ಸ್ಥಳದಲ್ಲಿ, ಉಮ್ಮತ್ತಿನ ಪ್ರತಿಯೊಬ್ಬ ವ್ಯಕ್ತಿಗೂ ಒಳ್ಳೆಯ ಕಾರ್ಯಗಳನ್ನು ಹರಡುವ, ಕೆಟ್ಟದ್ದನ್ನು ತಡೆಯುವ ಮತ್ತು ಅಲ್ಲಾಹನ ಕಡೆಗೆ ಆಹ್ವಾನಿಸುವ ಕರ್ತವ್ಯವನ್ನು ಪೂರೈಸುವ ಜವಾಬ್ದಾರಿಯನ್ನು ವಹಿಸಲಾಗಿದೆ. ಆದರೆ ಮತ್ತೆ ಹೇಳಿರುವುದು ಏಕೆಂದರೆ ಪ್ರಪಂಚದ ವ್ಯವಸ್ಥೆಯನ್ನು ಸಹ ನಡೆಸಬೇಕಾಗಿದೆ, ಆದ್ದರಿಂದ ಅದರಲ್ಲಿ ತೊಡಗಿರುವವರು ಯಾವಾಗಲೂ ಸಮಯವನ್ನು ನೀಡಲು ಸಾಧ್ಯವಿಲ್ಲ. ಧರ್ಮೋಪದೇಶ ಮತ್ತು ತರಬೇತಿಯ ಕೆಲಸವನ್ನು ಅತ್ಯುತ್ತಮ ರೀತಿಯಲ್ಲಿ ಮಾಡುವ ಮನೋಧರ್ಮ ಎಲ್ಲರಿಗೂ ಇರುವುದಿಲ್ಲ. ಮತ್ತು ಉಮ್ಮತ್ತಿನ ಎಲ್ಲಾ ಸದಸ್ಯರು ಧರ್ಮ ಮುಬಲ್ಲಿಗ್ ಮತ್ತು ಮುರಬ್ಬಿಯವರಿಗೆ ಅಗತ್ಯವಾದ ಧರ್ಮದ ತಿಳುವಳಿಕೆಯನ್ನು ಪಡೆಯಲು ಸಾಧ್ಯವಿಲ್ಲ. ಮತ್ತು ಎಲ್ಲಾ ಜನರಿಗೆ ವಿಶೇಷ ಗಮನದಿಂದ ತರಬೇತಿಯು ಸಹ ನೀಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ, ಸರ್ವಶಕ್ತನಾದ ಅಲ್ಲಾಹನ ಆದೇಶಗಳನ್ನು, ಅನುಸರಿಸಬೇಕಾದ ಆಜ್ಞೆಗಳನ್ನು ಮತ್ತು ತಡೆಯಬೇಕಾದ ನಿಷೇಧಗಳನ್ನು ಪರಿಚಯ ಮಾಡಿಕೊಳ್ಳಲು, ಮತ್ತು ಅದರ ಆಳವಾದ ಬುದ್ಧಿವಂತಿಕೆಯನ್ನು ಕಲಿಯಲು ಮತ್ತು ನಂತರ ಅದನ್ನು ಹರಡಲು. ಧರ್ಮವನ್ನು ಪೂರ್ಣ ಗಮನದಿಂದ ಕಲಿಯುವ ಒಂದು ವಿಶೇಷ ಗುಂಪು ಇರಬೇಕು. ಮಾಶಾಅಲ್ಲಾಹ್, ತಮ್ಮ ಅಭಿರುಚಿ ಮತ್ತು ಹವ್ಯಾಸಗಳಿಂದ ಲೌಕಿಕ ಶಿಕ್ಷಣದ ಜೊತೆಗೆ ಧಾರ್ಮಿಕ ಜ್ಞಾನದ ಬಗ್ಗೆ ಉತ್ತಮ ತಿಳುವಳಿಕೆಯನ್ನು ಹೊಂದಿರುವ ಅನೇಕ ಜನರು ಜಮಾತ್‌ನಲ್ಲಿದ್ದಾರೆ. ಆದರೆ ಕೆಲವೊಮ್ಮೆ ಅಥವ ಸಾಮಾನ್ಯವಾಗಿಯೇ ಅವರ ಇತರ ಕಾರ್ಯಗಳ ಕಾರಣದಿಂದಾಗಿ ಸಮಯವನ್ನು ನೀಡುಲು ನಿರಂತರವಾಗಿ ಸಾಧ್ಯವಾಗುವುದಿಲ್ಲ. ಅದಾಗ್ಯೂ, ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ, ಧರ್ಮದ ಕೆಲಸಕ್ಕಾಗಿ ವಾಖಿಫೀನೆ ಝಿಂದಗಿಯರ ಗುಂಪು ಇರಬೇಕು ಮತ್ತು ಇಸ್ಲಾಂ ಸಾರ್ವತ್ರಿಕ ಧರ್ಮವಾಗಿರುವುದರಿಂದ ಅದು ಪ್ರತಿಯೊಂದು ಪಂಗಡದಿಂದ, ಅಂದರೆ ಪ್ರತಿಯೊಂದು ಗುಂಪಿನಿಂದ, ಪ್ರತಿ ವರ್ಗದಿಂದ, ಪ್ರತಿಯೊಂದು ವಿಭಾಗದಿಂದ ಜನರ ಜನರ ಗುಂಪು ಇರಬೇಕು. ತದನಂತರ ಮತ್ತಷ್ಟು ವಿಸ್ತರಿಸಿದರೆ, ಪ್ರತಿಯೊಂದು ಖೌಮಿನ(ಗೋತ್ರದಿಂದ) ಜನರು ಧರ್ಮವನ್ನು ಕಲಿಯಬೇಕು ಮತ್ತು ಮುಂದೆ ಕಲಿಸಬೇಕು ಎಂದು ಹೇಳಿರುವನು. ಪ್ರತಿಯೊಂದು ಖೌಮಿನವರು ಮತ್ತು ಪ್ರತಿಯೊಂದು ವರ್ಗವು ವಿಭಿನ್ನ ಮನೋಧರ್ಮ, ಮನೋವಿಜ್ಞಾನ ಮತ್ತು ವಿಧಾನವನ್ನು ಹೊಂದಿದೆ. ಅದಕ್ಕೆ ತಕ್ಕಂತೆ ಉಪದೇಶ ಮಾಡುವ ವಿಧಾನವನ್ನು ಕೈಗೊಳ್ಳಬೇಕು. ಈ ರೀತಿಯಲ್ಲಿ, ತಬ್ಲೀಗ್ ಮತ್ತು ತರಬೇತಿಯು ಸುಲಭವಾಗುತ್ತದೆ. ಏನೇ ಇರಲಿ, ಸರ್ವಶಕ್ತನಾದ ಅಲ್ಲಾಹನು ತಬ್ಲೀಗಿಗಾಗಿ ಮತ್ತು ತರಬೇತಿಗಾಗಿ ಕಾರ್ಯವನ್ನು ನಿರ್ವಹಿಸುವ ವಿಶ್ವಾಸಿಗಳ ಗುಂಪು ಇರಬೇಕು ಮತ್ತು ನಂತರ ಪ್ರತಿಯೊಂದು ಖೌಮು ಮತ್ತು ಪ್ರತಿಯೊಂದು ವರ್ಗದ ಜನರು ಇರಬೇಕು ಇದರಿಂದ ಈ ಕಾರ್ಯವನ್ನು ಸುಗಮಗೊಳಿಸಬಹುದು ಎಂದು ನಮಗೆ ಮಾರ್ಗದರ್ಶನ ನೀಡಿರುವನು.

ಆದುದರಿಂದ ಅಹ್ಮದಿಯಾ ಜಮಾಅತ್ ಈ ತತ್ವದಡಿಯಲ್ಲಿ ಧರ್ಮಕ್ಕಾಗಿ ತನ್ನ ಜೀವನವನ್ನು ಮುಡಿಪಾಗಿಡುವ ವ್ಯವಸ್ಥೆಯನ್ನು ಹೊಂದಿದೆ. ಮತ್ತು ನಾನು ಹೇಳಿದಂತೆ, ಅಲ್ಲಾಹನ ಅನುಗ್ರಹದಿಂದ ವಿವಿಧ ಖೌಮುಗಳು ಮತ್ತು ವರ್ಗಗಳ ಜನರು ಈಗ ಈ ವ್ಯವಸ್ಥೆಯ ಭಾಗವಾಗಿದ್ದಾರೆ ಮತ್ತು ಆಗುತ್ತಿದ್ದಾರೆ. ಮತ್ತು ನಾನು ಹೇಳಿದಂತೆ, ಜಮಾಅತ್ತಿನ ಅಗತ್ಯತೆಗಳು ಹೆಚ್ಚಾದಂತೆ, ಈ ಸಂಖ್ಯೆಯ ಅಗತ್ಯವು ಹೆಚ್ಚಾಗುತ್ತದೆ ಮತ್ತು ಈ ಅಗತ್ಯವು ಬೆಳೆಯುತ್ತಲೇ ಇರುತ್ತದೆ. ಇದೀಗ ಪ್ರಸ್ತುತ ಕಾಲದಲ್ಲಿ ಅಗತ್ಯವಿರುವುದು ಮಾತ್ರವಲ್ಲದೆ ಭವಿಷ್ಯದಲ್ಲಿಯು ಇದರ ಅಗತ್ಯವು ಹೆಚ್ಚಾಗಲಿದೆ.

**(ಖುತ್‌ಬ ಜುಮುಅ, ಅಕ್ಟೋಬರ್ 22, 2010)**

**(ಇಂಚಾರ್ಜ್ ನಖ್ಫೆ ನೌ ವಿಭಾಗ ಭಾರತ)**

## ಮಹೋನ್ನತನಾದ ದೇವ

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

"ನಮ್ಮ ದೇವನೇ ನಮ್ಮ ಸ್ವರ್ಗ. ನಮ್ಮ ಅತ್ಯುನ್ನತ ಸಂತೋಷಗಳು ನಮ್ಮ ದೇವನಲ್ಲಿವೆ. ಏಕೆಂದರೆ ನಾವು ಅವನನ್ನು ನೋಡಿರುವೆವು ಮತ್ತು ಪ್ರತಿಯೊಂದು ಸೌಂದರ್ಯವನ್ನು ನಾವು ಅವನಲ್ಲಿ ಕಂಡಿರುವೆವು. ಜೀವವನ್ನು ಬಲಿಯರ್ಪಿಸುವುದರಿಂದ (ದೇವನೆಂಬ) ಈ ಸಂಪತ್ತು ಸಿಗಬಹುದಾದರೆ ಹಾಗೆ ಪಡೆಯಲು ಅದು (ಆ ಸಂಪತ್ತು) ಅರ್ಹವಾಗಿದೆ. ಒಬ್ಬನು ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುವುದರಿಂದ ಪಡೆಯಬಹುದಾಗಿದ್ದರೆ ಹಾಗೆ ಖರೀದಿಸಲು ಯೋಗ್ಯವಾದ ಮಾಣಿಕ್ಯ ಇದಾಗಿದೆ. ಎಲೈ ಭಾಗ್ಯಹೀನರೇ, ನೀವು ಈ ಕಾರಂಜಿಯ ಕಡೆಗೆ ಓಡಿ ಬನ್ನಿರಿ. ಇದು ನಿಮ್ಮ ಬಾಯಾರಿಕೆಯನ್ನು ನೀಗಿಸುವುದು. ಇದು ನಿಮ್ಮನ್ನು ರಕ್ಷಿಸುವಂತಹ ಜೀವಜಲವನ್ನೀಯುವ ಕಾರಂಜಿಯಾಗಿದೆ. ನಾನೇನು ಮಾಡಲಿ? ಈ ಶುಭವಾರ್ತೆಯನ್ನು ಜನಹೃದಯಗಳಲ್ಲಿ ಹೇಗೆ ನೆಲೆವೂರುವಂತೆ ಮಾಡಲಿ? ಇವನೇ ನಿಮ್ಮ ದೇವನು ಎಂದು ಜನರು ಆಲಿಸುವಂತೆ ಮಾಡಲು ಯಾವ ಡೋಲು ಬಾರಿಸಿ ಪೇಟೆಗಳಲ್ಲಿ ಡಂಗುರ ಸಾರಲಿ? ಜನರು ಕಿವಿಗೊಟ್ಟು ಕೇಳುವಂತೆ ಮಾಡಲು ನಾನು ಯಾವ ಮದ್ದಿನಿಂದ ಚಿಕಿತ್ಸೆ ನಡೆಸಲಿ? ನೀವು ದೇವನಿಗೆ ಸೇರಿದವರಾಗುವಿರಾದರೆ, ದೇವನು ನಿಮ್ಮವನೇ ಆಗುವನು ಎಂದು ದೃಢವಾಗಿ ಅರಿತುಕೊಳ್ಳಿರಿ." *(ಕಿಶ್ತಿ ಎ ನೂಹ್; ರೂಹಾನೀ ಖಝಾಇನ್ ಸಂಪುಟ 19, ಪುಟ 21 – 22)*

## ಸೂಚನೆ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಪ್ರತಿ ಶುಕ್ರವಾರ ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **ಖುತ್‌ಬ ಜುಮುಅವನ್ನು** ನೀಡುತ್ತಾರೆ. ಅದರ ನೇರ ಪ್ರಸಾರ MTA ಮುಖಾಂತರ ವೀಕ್ಷಿಸಲು ವಿನಂತಿಸಿಕೊಳ್ಳುತ್ತೇವೆ

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2023-25 Vol No.04, Thursday, 13 April 2023, Issue No. 15

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

# ಇಸ್ಲಾಂ ಮತ್ತು ಸೈಯ್ಯದ್‌ನಾ ಹಝ್ರತ್ ಮಸಿಹ್ ಮೌಊದ್ ಅಲೈಹಿಸ್ಸಲಾಮ್‌ರವರ ಕಟು ವಿರೋಧಿಯಾದ ಅಲೆಕ್ಸಾಂಡರ್ ಡೂಯಿಯ ಝಿಯಾನ್ ನಗರದಿಂದ ಪ್ರಾರಂಭವಾದ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಅಸಾಧಾರಣ ಅನುಗ್ರಹದಾಯಕ ಅಮೇರಿಕದ ಐತಿಹಾಸಿಕ ಪ್ರವಾಸ ಸೆಪ್ಟೆಂಬರ್, ಅಕ್ಟೋಬರ್ 2022

*(ಬದರ್ ಸಂಚಿಕೆ–13ರ ಉಳಿದ ಭಾಗ ಮುಂದುವರಿಸಲಾಗಿದೆ)*

## ಸಾಮೂಹಿಕ ಭೇಟಿಗಳು ಮತ್ತು ಅನಿಸಿಕೆಗಳು

ಕಾರ್ಯಕ್ರಮದನ್ವಯ 6 ಗಂಟೆ 10 ನಿಮಿಷಕ್ಕೆ ಹುಝೂರ್ ಅನ್ವರ್(ಅತಬಿಅ) ಕಾರ್ಯಕ್ರಮದನ್ವಯ 6 ಗಂಟೆ 10 ನಿಮಿಷಕ್ಕೆ ಹುಝೂರ್ ಅನ್ವರ್(ಅತಬಿಅ) ಮಸೀದಿಯ ಪುರುಷರ ಸಭಾಂಗಣಕ್ಕೆ ಆಗಮಿಸಿದರು. ಅಲ್ಲಿ ಪುರುಷರ ಒಂದು ಗುಂಪು ಭೇಟಿಗಾಗಿ ಕಾದು ನಿಂತಿದ್ದರು. ಅದರ ಸಂಖ್ಯೆ 27 ಆಗಿತ್ತು. ಅವರುಗಳು ಸ್ಥಳೀಯ ಜಮಾಅತ್ ಝಿಯಾನ್ ಅಲ್ಲದೇ ಇತರ 14 ಜಮಾಅತುನವರು ಬಂದಿದ್ದರು. ಅವರಲ್ಲಿ ಕೆಲ ಮಿತ್ರರು ಕನ್‌ಟಕಿಯಿಮದ 452 ಮೈಲು ಜಾರ್ಜಿಯಾದಿಂದ 748 ಮೈಲು ಪ್ರಯಾಣ ಮಾಡಿ ಬಂದಿದ್ದರು. ಅದಾಗ್ಯೂ ಸ್ಯಾಟಲ್‌ನಿಂದ ಬಂದವರು 2014 ಮೈಲು ಮತ್ತು ಪೋರ್ಟ್‌ಲ್ಯಾಂಡಿನಿಂದ ಬಂದವರು 2087 ಮೈಲಿನಷ್ಟು ದೂರದ ಪ್ರಯಾಣ ಮಾಡಿ ತನ್ನ ಪ್ರೀತಿಯ ಇಮಾಮರೊಂದಿಗೆ ಭೇಟಿ ಮಾಡಲು ಇಲ್ಲಿ ತಲುಪಿದ್ದರು. ಹುಝೂರ್ ಅನ್ವರ್(ಅತಬಿಅ) ಪ್ರೀತಿಪೂರ್ವಕವಗಿ ಎಲ್ಲರೊಡನೆ ಸರತಿಯ ಮೇರೆಗೆ ಭೇಟಿ ಮಾಡುತ್ತಾ ಅವರು ಪರಿಚಯ ಪಡೆದರು ಅವರಿಂದ ವಿಚಾರಿಸಿದರು. ನೀವು ಎಲ್ಲಿಂದ ಬಂದಿರುವಿರಿ ಎಂಬು ಬಂದಿರಿ. ಏನು ಕೆಲಸ ಮಾಡುತ್ತಿದ್ದೀರಿ. ಹುಝೂರ್ ಅನ್ವರ್(ಅತಬಿಅ) ಪ್ರತಿಯೊಬ್ಬರಿಂದ ಅವರ ಕುಶಲಕ್ಷೇಮವನ್ನು ವಿಚಾರಿಸಿಕೊಂಡರು. ವಿದ್ಯಾರ್ತಿಗಳಿದ್ದವರನ್ನು ಹುಝೂರೆ ಪೆನ್ ನೀಡಿದರು. ತಂದೆಯ ಜೊತೆಯಲ್ಲಿ ಬಂದ ಸಣ್ಣ ವಯಸ್ಸಿನ ಮಕ್ಕಳಿಗೆ ಹುಝೂರ್ ಅನ್ವರ್(ಅತಬಿಅ) ಪ್ರೀತಿಪೂರ್ವಕವಾಗಿ ಚಾಕ್ಲೇಟ್ ನೀಡಿದರು.

ಗುಲ್ಫಾಮ್ ಅಶ್ರಫ್ ಸಾಹಿಬ್ ತಿಳಿಸಿದರು. ನನ್ನ ಸಂಬಂಧ ಗೋಜ್ರಾನ್ವಾಲದಿಂದಿದೆ, ಹುಝೂರರ ದರ್ಶನ ಪಡೆದು ನನ್ನ ನಯನಗಳು ತಂಪಾದವು ಅವರು ಹುಝೂರರ ಸೇವೆಯಲ್ಲಿ ನಿವೇದಿಸಿಕೊಇಂಡರು. ನಾನು ಕಂಪ್ಯೂಟರ್ ಸೈನ್ಸ್ ನಲ್ಲಿ ಡಿಗ್ರಿ ಮಾಡಿರುತ್ತೇನೆ. ಈಗ ಹುಝೂರರ ಜೊತೆ ಭೇಟಿಯಾಗಿದ್ದೇನೆಂದರೆ ಇನ್‌ಶಾಅಲ್ಲಾಹ್ ಈ ಭೇಟಿಯ ಅನುಗ್ರಹದಿಂದ ಕೆಲಸ ಸಹ ದೊರೆಯಬಹುದು. ನಂತರ ಅವರು ತಮ್ಮ ಅನಿಸಿಕೆ ವ್ಯಕ್ತಪಡಿಸುತ್ತಾ ಹೇಳಿದರು. ನಾನು ಹುಝೂರರನ್ನು ಕಂಡು ತಮ್ಮ ವಿಶ್ವಾಸ ವೃದ್ಧಿಸಿಕೊಂಡಿದ್ದೇನೆ. ಹುಝೂರರ ಸಹವಾಸದಲ್ಲಿ ಕುಳಿತು ಹಝ್ರತ್ ರಸೂಲುಲ್ಲಾಹ್(ಸ) ಅವರ ಕಾಲ ನೆನಪಾಯಿತು ಹುಝೂರರ ಸಂಗಡ ಫಲವಾಗಿ ನನಗೆ ಇನ್ನಷ್ಟು ಧರ್ಮ ಸೇವೆ ಮಾಡುವ ಭಾವನೆ ಬೆಳೆದವು.

ಮಾನ್ಯ ಝುಫರ್ ಸಲೀಮ್ ಸಹಿಬ್ ಅವರು ಮೌಲ್ವ ಜಮಾಅತಿನಿಂದ ಬಂದಿದ್ದರು. ಅವರ ಕಣ್ಣುಗಳಿಂದ ಭಾಷ್ಪಗಳು ಸುರಿಯುತ್ತಿತ್ತು ಹೇಳಿದರು ಖಲೀಫರು ನಮ್ಮವರಾಗಿದ್ದಾರೆ. ನಾವು ಅವರದ್ದಾಗಿದ್ದೇವೆ ಎಂದಿಷ್ಟು ಹೇಳಬಹುದು ಹುಝೂರ್ ಅನ್ವರ್(ಅತಬಿಅ) ಯಾವ ರೀತಿ ಪ್ರೀತಿಯಿಂದ ಮಾತನಾಡಿದ್ದಾರೆ. ಅದರಿಂದ ನಮ್ಮ ಮೇಲೆ ಖಲಿಫರ ನೆರಳಿದೆ ಎಂದು ಭಾಸವಾಗುತ್ತದೆ.

ಮಿಂಯಾ ಅನ್ವರ್ ಅಹ್ಮದ್ ಸಾಹಿಬ್ ಅವರು ಶಿಕಾಗೋ ಜಮಾಅತಿನಿಂದ ಬಂದಿದ್ದರು. ಅವರು ತಮ್ಮ ಭಾವನೆಗಳನ್ನು ಹೀಗೆ ವ್ಯಕ್ತಪಡಿಸಿದರು. ಇದು ಹುಝೂರರ ಜೊತೆ ನನ್ನ ಮೊದಲ ಭೇಟಿಯಾಗಿತ್ತು. ನಾನು ಹುಝೂರರ ಜೊತೆ ಮಾತನಾಡುವಾಗ ನನ್ನ ಕೈಗಳು ಕಂಪಿಸುತ್ತಿದ್ದವು. ನನ್ನ ಜೀವನದ ಅಭಿಲಾಷೆ ಇಂದು ಪೂರ್ಣಗೊಂಡಿದೆ.

zion ಜಮಾಅತಿನಿಂದ ಯುವಕರೊಬ್ಬರು Achmaf Isam ಹುಝೂರರ ಸೇವೆಯಲ್ಲಿ ಹೇಳಿದರು. ನನ್ನ ಸಂಬಂಧ ಮರಾಕಶ್ ದೇಶದೊಂದಿದೆ. ಮತ್ತು ನಾನು ಮಕಾರಶ್ ಜಮಾಅತಿನ ಅಧ್ಯಕ್ಷರ ಪುತ್ರನಾಗಿದ್ದೇನೆ. 2011 ರಿಂದ ಇಲ್ಲಿ ಅಮೇರಿಕಾದಲಿಲದದೇನೆ. ಇಲ್ಲಿ ವಿದ್ಯೆ ಪೂರ್ಣಗೊಳಿಸಿ ಜಾಬ್ ಮಾಡುತ್ತಿದ್ದೇನೆ. ಅವರು ಭೇಟಿಯ ನಂತರ ತಮ್ಮ ಭಾವನೆಗಳನ್ನು ಹೀಗೆ ವ್ಯಕ್ತಪಡಿಸಿದರು. ಇದು ಸಾಮೂಹಿಕ ಭೇಟಿಯ ಕಾಯ್ಕ್ರಮವಾಗಿದ್ದರೂ ಭೇಟಿ ಮಾಡಲು ಹೆಚ್ಚಿನ ಸಮಯ ದೊರಕಿತು. ನನಗೆ ಇದು ವಿಶಿಷ್ಠ ಕ್ಷಣಗಳಾಗಿದ್ದವು. ನಾನು ಹಿಂದಿನ ಕೆಲ ದಿನಗಳಿಂದ ನಿರಂತರ ಡ್ಯೂಟಿ ಕೆಲಸದಲ್ಲಿದ್ದೆ. ಆದರೆ ಇಂದಿನ ಈ ಭೇಟಿ ನನಗೆ ಪುನರ್ಜನ್ಮ ನೀಡಿದಂತಾಯಿತು.

ಡೆಟ್ರಾಯಿಟ್‌ನಿಂದ ಬಂದಿದ್ದ ಮಹ್ಮೂದ್ ಅಸ್ಲಮ್ ಸಾಹಿಬ್ ಹೇಳಿದರು. ಅಲ್ಲಾಹನ ಪ್ರಕಾಶ ನನ್ನ ಮುಂದಿತ್ತು. ಹುಝೂರರ ದೃಷ್ಟಿ ನನ್ನ ಮೇಲಿತ್ತು. ನನಗೆ ಜೀವನದಲ್ಲಿ ಎಲ್ಲವೂ ಲಭಿಸಿದ ಅನುಭವವಾಯಿತು.

ರಿಚ್ಮಂಡ್ ಜಮಾಅತ್‌ನಿಂದ ಬಂದಿದ್ದ ಓರ್ವ ವಿದ್ಯಾರ್ಥಿ ಸಮಿಉಲ್ಲ ಸಾಹಿಬ್ ಹೇಳಿದರು. ಹುಝೂರರ ಜೊತೆಗಿನ ನನ್ನ ಭೇಟಿ ಒಂದು ಹೊಸ ಅನುಭವವಾಗಿತ್ತು. ನನಗೆ ಮಾತನಾಡಲು ಸಾಧ್ಯವಾಗುತ್ತಿರಲಿಲ್ಲ. ನಾನು ನನ್ನ ವಿಧ್ಯಭ್ಯಾಸ ಉತ್ತಮವಾಗಿ ಸಾಗಲು ದುಆ ಮಾಡಲು ಹಾಗೂ ಹುಝೂರರೊಡನೆ ಪೆನ್ನು ನೀಡಲು ಬೇಡಿಕೊಂಡೆ. ಹುಝೂರ್ ಅನ್ವರ್(ಅತಬಿಅ) ನನಗೆ ಪೆನ್ ನೀಡಿದರು ನನಗೆ ತುಂಬಾ ವಿಶ್ವಾಸವಿದೆ. ಅಲ್ಲಾಹನು ನನಗೆ ಸಹಕರಿಸುವನು.

ಸೆಂಟ್‌ಲೂಯಿಸ್ ಜಮಾಅತಿನಿಂದ ಬಂದಿದ್ದ ಸಯ್ಯದ್ ಝುಹೀರ್ ಶೌಹ್ ಸಾಹಿಬ್ ಹೇಳಿದರು. ನನಗೆ ಮಾತನಾಡಲು ನನ್ನ ಬಳಿ ಶಬ್ಧಗಳಿಲ್ಲ, ನಾನು ಯಾವ ರೀತಿಯ ಅನುಭವದಲ್ಲಿದ್ದೇನೆ ಅದನ್ನು ವಿವರಿಸಲು ಆಗುತ್ತಿಲ್ಲ.

ಹೆದ್ರಾಬಾದ್ (ಭಾರತ) ದಿಂದ ಬಂದ ಓರ್ವ ಯುವಕನು ಹೇಳಿದನು. ನಾನು ಎಂಟು ತಿಂಗಳ ಹಿಂದೆ ಐಟಿಯಲ್ಲಿ ಮಾಸ್ಟರ್ ಡಿಗ್ರಿ ಪಡೆಯಲು ಬಂದಿರುತ್ತೇನೆ. ಹುಝೂರ್‌ರ ಜೊತೆ ಭೇಟಿಯಾಗಲು ಕಾತುರದಿಂದ ಕಾಯುತ್ತಿದ್ದೆ. ಅದು ಇಂದು ಪೂರ್ಣಗೊಂಡಿದೆ.

ಹೈದ್ರಾಬಾದ್ (ಭಾರತ) ದಿಂದ ಬಂದ ಇನ್ನೊರ್ವ ಮಿತ್ರರು ಹೇಳಿದರು. ನಾನು computer science ನಲ್ಲಿ Bachelor ಮಾಡಲು ಇಲ್ಲಿ ಬಂದಿದ್ದೇನೆ.

ಹೈದ್ರಾಬಾದ್ (ಭಾರತ) ದಿಂದಲೇ ಬಂದ ಇನ್ನೋರ್ವ ಮಿತ್ರರು ಹೇಳೀದರು. ನಾನು ಇಲ್ಲಿ ಇಂಜಿನಿಯರಿಂಗ್ ಮ್ಯಾನೇಜ್‌ಮೆಂಟ್ ಮಾಡುತ್ತಿದ್ದೇನೆ. ಇವರುಗಳೆಲ್ಲ ಹೆದ್ರಾಬಾದ್ ಜಮಾಅತಿನ ಸದಸ್ಯರು ತಮ್ಮ ಮಿತ್ರರ ಸಂಬಂಧಿಕರ ಸಲಾಂ ಹುಝೂರ್‌ರಿಗೆ ತಲುಪಿಸಿದರು ಮತ್ತು ದುಆ ಆಪೇಕ್ಷಿಸಿದರು. ಹುಝೂರ್ ಅನ್ವರ್(ಅತಬಿಅ) ಹೇಳಿದರು. ಅಲ್ಲಾಹನು ಅನುಗ್ರಹಿಸಲಿ. ನೀವು Computer science ನಲ್ಲಿ ಮಾಸ್ಟರ್ ಡಿಗ್ರಿ ಪಡೆಯಲು ಇಲ್ಲಿ ಬಂದಿದ್ದೀರಿ. ಭಾರತವು ಈ ಕ್ಷೇತ್ರದಲ್ಲಿ ತುಂಬಾ ಮುಂದಿದೆ. ಅಲ್ಲಿಯ ಶಿಕ್ಷಣದ ಗುಣಮಟ್ಟವು ಉತ್ತಮವಾಗಿದೆ.

ಈ ಸಾಮೂಹಿಕ ಭೇಟಿಯ ಕೊನೆಯಲ್ಲಿ ಎಲ್ಲರೂ ಸರತಿಯಂತೆ ಹುಝೂರ್‌ರ ಜೊತೆ ಭಾವಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು.

6 ಗಂಟೆ 45 ನಿಮಿಷಕ್ಕೆ ಈ ಭೇಟಿಯ ಅಂತ್ಯಗೊಂಡಿತು. ನಂತರ ಹುಝೂರ್ ಅನ್ವರ್(ಅತಬಿಅ) ಒಂದು ಬೇರೆ ಸಭಾಂಗಣಕ್ಕೆ ತೆರಳಿದರು ಅಲ್ಲಿ ಲಜ್ನ ಗುಂಪು ಹುಝೂರ್‌ರ ಜೊತೆ ಭೇಟಿ ಮಾಡಲು ಕಾದು ಕುಳಿತಿದ್ದರು. ಅದರಲ್ಲಿ ಮಹಿಳೆಯರ ಸಂಖ್ಯೆ 80 ರಷ್ಟಿತ್ತು. ಅವರು zion ಜಮಾಅತ್ ಅಲ್ಲದೇ ಇತರ 17 ವಿವಿಕಧ ಜಮಾಅತುಗಳಿಂದ ಬಂದಿದ್ದರು.

*(ಪುಟ 11 ರಲ್ಲಿ ಮುಂದುವರಿಸಲಾಗಿದೆ)*

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800–103–2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.